# ಕನ್ನಡ

# KANNADA

## ತರಗತಿ

## 2

## ಭಾಗ - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**Prepared by :**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2015

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ-ವಿನಯದಿಂದ ಕೂಡಿದ ಮಾತು ಎಲ್ಲರನ್ನೂ ಸೆಳೆಯುತ್ತದೆ. ನಮ್ಮ ಮಾತುಕೃತಿಗಳು ನಮ್ಮ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನಮ್ಮ ಕನ್ನಡ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕು. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ಚಿತ್ರಕಥೆ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿಮ್ಮ ಭಾವನೆಗಳು ಮತ್ತು ಅನುಭವಗಳನ್ನು ಪ್ರಕಟಿಸಲು ಈ ಪಠ್ಯಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಈ ಪಠ್ಯಪುಸ್ತಕದಲ್ಲಿರುವ ಉತ್ತಮ ಮೌಲ್ಯಗಳು ಮತ್ತು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಿಮಗೆಲ್ಲರಿಗೂ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಎಸ್. ರವೀಂದ್ರನ್ ನಾಯರ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ., ಕೇರಳ

## TEXT BOOK DEVELOPMENT COMMITTEE

## KANNADA

## STANDARD 2

Participants : Arathi K., S.A.T.H.S. Manjeshwar
Jalajakshi P., G.H.S.S. Bellur
Kumara Subrahmanya M., D.I.E.T. Lab School Maipady
Mahalinga Bhat N., A.U.P.S. Dharmathadka
Ravishankar K., G.J.B.S. Peral
Srikumari K., A.U.P.S. Anekal

Experts : Dr. Rathnakara Mallamoole, Asst. Professor, Govt. College, Kasaragod
Shridhara N., Asst. Professor, Govt. College, Kasaragod
Dr. Srikrishna Bhat, Rtd. Professor, Govt. College, Kasaragod

Artists : Madhusoodhan K.V., G.V.H.S.S. Thrikaripur
Rajendra Prasad C.K., G.H.S.S. Uppala.
Sacheendran Karadka

Academic Co-Ordinator

Dr. Faisal Mavulladathil, Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012





| ಕ್ರಮ ಸಂಖ್ಯೆ | ಘಟಕ | ಪುಟಸಂಖ್ಯೆ |
|---|---|---|
| 1. | ಹಳ್ಳಿಯ ಸೊಬಗು | 6 |
| 2. | ನಮ್ಮ ಮನೆ | 24 |
| 3. | ಅಂಗೈಯಲ್ಲಿ ಆರೋಗ್ಯ | 52 |
| 4. | ಹಸಿರಿನ ಸಿರಿ | 76 |

## ಪಾಠ - 1

# ಹಳ್ಳಿಯ ಸೊಬಗು



"ರೇಖಾ... ರೇಖಾ..." ' ಆಟವಾಡುತ್ತಿದ್ದ ರೇಖಾ ಅಮ್ಮನ ಕರೆ ಕೇಳಿ ಓಡಿ ಬಂದಳು. "ಏನಮ್ಮ....?" ಎಂದು ಕೇಳಿದಳು. "ನಾಳೆ ಅಜ್ಜನ ಮನೆಯಲ್ಲಿ ಮನೆ ತುಂಬಿಸುವ ಕಾರ್ಯಕ್ರಮ. ಬೇಗ ಸ್ನಾನಮಾಡಿ ಸಿದ್ಧಳಾಗು" ಎನ್ನುತ್ತಾ ಅಮ್ಮ ಬೇಗಬೇಗನೆ ಮನೆ ಕೆಲಸ ಮುಗಿಸಿದರು. ರೇಖಾ ಮತ್ತು ಅವಳ ತಮ್ಮ ಹೊಸ ಉಡುಪು ಧರಿಸಿ ಅಮ್ಮನೊಂದಿಗೆ ಮಲ್ಲೂರಿನಲ್ಲಿರುವ ಅಜ್ಜಿ ಮನೆಗೆ ಹೊರಟರು. ಬಸ್ಸು ಮಲ್ಲೂರು ತಲುಪಿದಾಗ ಮಧ್ಯಾಹ್ನವಾಗಿತ್ತು. ಬಸ್ಸಿನಿಂದ ಇಳಿದು ಅವರು ಅಮ್ಮನೊಂದಿಗೆ ಹೊಲದ ದಾರಿಯಾಗಿ ಮುಂದೆ ಸಾಗಿದರು.

# ನಮ್ಮ ಊರು

ಹಳ್ಳಿಯ ಮಡಿಲಲಿ
ತುಂಬಿದ ಸೊಬಗಿದೆ
ಸವಿಯುತ ಸಾಗೋಣ ॥

ತೆಂಗಿನ ಕಂಗಿನ
ಮರಗಳ ನಡುವೆ
ನಲಿಯುತ ನಡೆಯೋಣ ॥

ಬಯಲಿನ ಬದಿಯಲಿ
ನಾಟ್ಯವ ಮಾಡುವ
ನವಿಲನು ನೋಡೋಣ ॥

ಜುಳು ಜುಳು ಹರಿಯುವ
ನೀರಲಿ ಆಡುತ
ಮೋಜನು ಮಾಡೋಣ ॥

ಹಕ್ಕಿಗಳಿಂಚರ
ಕೇಳುತ ನಾವು
ಜೊತೆಯಲಿ ಹಾಡೋಣ ॥

ಬೇಸರ ಕಳೆದು
ಸಂತಸ ಪಡೆದು
ಹರುಷದಿ ನಲಿಯೋಣ ॥





## ಹಾಡಿರಿ

ಈ ಪದ್ಯವನ್ನು ರಾಗವಾಗಿ ಹಾಡಿರಿ.

## ಉತ್ತರಿಸಿರಿ

1. ಹಳ್ಳಿಯಲ್ಲಿ ಯಾವ ಯಾವ ದೃಶ್ಯಗಳನ್ನು ಕಾಣಲು ಸಾಧ್ಯವಿದೆ?

## ಬರೆಯಿರಿ

ಕೆಳಗೆ ಕೊಟ್ಟಿರುವ ರೀತಿಯ ಇತರ ಪದಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

| | |
|---|---|
| • ಸಾಗೋಣ | • ನಡೆಯೋಣ |
| • ________________ | • ________________ |
| • ________________ | • ________________ |



## ಬರೆಯಿರಿ

**ಹೊಂದಿಸಿ ಬರೆಯಿರಿ.**


| | |
|---|---|
| ಹಳ್ಳಿಯ | ನಾಟ್ಯ |
| ನವಿಲಿನ | ಹಕ್ಕಿ |
| ಹರಿಯುವ | ಸೊಬಗು |
| ಹಾಡುವ | ನೀರು |





ಮರುದಿನ ಮನೆತುಂಬಿಸುವ ಕಾರ್ಯಕ್ರಮ. ಮಾವ ಗದ್ದೆಗೆ ಹೋಗಿ ತೆನೆಗಳನ್ನು ಕಿತ್ತು ತಂದರು. ತೆನೆಗಳನ್ನು ಪೂಜಿಸಿದರು.

## ಮನೆ ತುಂಬಿಸುವುದು



ಮನೆ ತುಂಬಿಸುವುದು ಕೃಷಿಗೆ ಸಂಬಂಧಿಸಿದ ಒಂದು ಆಚರಣೆಯಾಗಿದೆ. ಇದು ಶುಭಮುಹೂರ್ತದಲ್ಲಿ ಭತ್ತದ ತೆನೆಗಳನ್ನು ಮೊದಲಬಾರಿಗೆ ಮನೆಗೆ ತಂದು ಪೂಜಿಸಿ ಕಟ್ಟುವ ಒಂದು ಆಚರಣೆಯಾಗಿದೆ. ಮನೆಯ ಯಜಮಾನನು ಸೂರ್ಯೋದಯಕ್ಕಿಂತ ಮೊದಲು ಎದ್ದು ಸ್ನಾನ ಮಾಡಿ ಗದ್ದೆಗೆ ಹೋಗುವನು. ಬಳಿಕ ಗದ್ದೆಯಿಂದ ತೆನೆಗಳನ್ನು ಆಯ್ದು ತೆಗೆಯುವನು. ಜೊತೆಗೆ ಅತ್ತಿ, ಆಲ, ಅಶ್ವತ್ಥ ಮೊದಲಾದ ವೃಕ್ಷಗಳ ಎಲೆಗಳನ್ನೂ ಸಂಗ್ರಹಿಸುವನು. ಅವುಗಳನ್ನು ಬಾಳೆಎಲೆಯಲ್ಲಿ ಇಟ್ಟು ತೆಗೆದುಕೊಂಡು ಬರುವನು. ಸೆಗಣಿ ಸಾರಿಸಿದ



ಅಂಗಳದಲ್ಲಿ ಇಟ್ಟಿರುವ ಮಣೆಯ ಮೇಲೆ ಇರಿಸುವನು.

ಅನಂತರ ಮನೆಯ ಯಜಮಾನ "ಪೊಲಿ, ಪೊಲಿ" ಎಂದು ಹೇಳುತ್ತಾ ತೆನೆಗಳನ್ನೂ ಎಲೆಗಳನ್ನೂ ದೇವರ ಮುಂದಿರಿಸಿ ಪೂಜಿಸುವನು. ಅನಂತರ ತೆನೆಗಳನ್ನು ಎಲೆಗಳಿಂದ ಸುತ್ತಿ ದಡ್ಡಾಲದ ನಾರಿನಿಂದ ಬಿಗಿಯುವರು. ಅದನ್ನು ಮನೆಯ ಮಾಡು, ತುಳಸೀಕಟ್ಟೆ, ಫಲವೃಕ್ಷಗಳೇ ಮೊದಲಾದವುಗಳಿಗೆ ಕಟ್ಟುವರು. ಬೇಸಾಯಕ್ಕೆ ಸಂಬಂಧಿಸಿದ ಈ ಆಚರಣೆಯಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸಗಳು ಕಂಡುಬರುತ್ತವೆ.

### ಉತ್ತರಿಸಿರಿ

- ಮನೆ ತುಂಬಿಸುವುದು ಯಾವುದಕ್ಕೆ ಸಂಬಂಧಿಸಿದ ಆಚರಣೆಯಾಗಿದೆ?
- ಮನೆ ಯಜಮಾನ ತೆನೆಗಳನ್ನು ತರುವುದು ಎಲ್ಲಿಂದ?
- ತೆನೆಗಳನ್ನು ಕಟ್ಟುವ ರೀತಿ ಹೇಗೆ?

## ಬರೆಯಿರಿ

- ಕೋಣೆಯಲ್ಲಿ ಅಡಗಿರುವ ಹಬ್ಬಗಳನ್ನು ಗುರುತಿಸಿ ಉರುಟು ಹಾಕಿರಿ.

| | | | | | |
|---|---|---|---|---|---|
| ಕ್ರಿ | ಸ್ | ಮ | ಸ್ | ಸ್ವಾ | ಚೌ |
| ಓ | ಬ | ಕ್ರೀ | ದ್ | ತಂ | ತಿ |
| ಣಂ | ಈ | ಸ್ಟ | ರ್ | ತ್ರ್ಯೋ | ನ |
| ಗ | ಣ | ರಾ | ಜ್ಯೋ | ತ್ಸ | ವ |
| ದೀ | ಪಾ | ವ | ಳಿ | ವ | ರಾ |
| ರಂ | ಜಾ | ನ್ | ವಿ | ಷು | ತ್ರಿ |

## ಪಟ್ಟಿಮಾಡಿರಿ

- ನಿಮ್ಮ ಊರಿನಲ್ಲಿ ಯಾವ ಯಾವ ಆಚರಣೆಗಳಿವೆ. ಪಟ್ಟಿ ಮಾಡಿರಿ.

## ಆಲ್ಬಂ ತಯಾರಿಸಿರಿ

- ವಿವಿಧ ಆಚರಣೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿರಿ.

ರೇಖಾಳ ಅಮ್ಮ ಮತ್ತು ಅತ್ತೆ ಔತಣದ ಸಿದ್ಧತೆ ಮಾಡಿದರು. ಎಲ್ಲರಿಗೂ ರುಚಿಕರವಾದ ಊಟ ಬಡಿಸಿದರು. ಎಲ್ಲರೂ ಸಂತೋಷದಿಂದ ಊಟ ಮಾಡಿದರು. ಅಷ್ಟರಲ್ಲಿ ಬಾಗಿಲು ತಟ್ಟಿದ ಸದ್ದು ಕೇಳಿತು. ರೇಖಾ ಓಡಿಹೋಗಿ ಬಾಗಿಲು ತೆರೆದಳು. ಬಾಗಿಲ ಬಳಿ ಖಾಕಿ ಉಡುಪು ಧರಿಸಿ ನಿಂತಿದ್ದವನನ್ನು ಕಂಡು "ಯಾರು ನೀವು?" ಎಂದು ಕೇಳಿದಳು. "ನಾನು ಅಂಚೆಯ ಅಣ್ಣ. ಇಗೋ ಕಾಗದ" ಅಂಚೆಯ ಅಣ್ಣ ಹೇಳಿದನು.

# ಅಂಚೆಯ ಅಣ್ಣ

ಅಂಚೆಯ ಅಣ್ಣ
ಬಂದಿಹೆ ಚಿಣ್ಣ
ಅಂಚೆಯ ಹಂಚಲು ಮನೆಮನೆಗೆ ॥

ಸಾವಿರ ಸುದ್ದಿಯ
ಬೀರುತ ಬರುವೆನು
ತುಂಬಿದ ಚೀಲವು ಹೆಗಲೊಳಗೆ ॥

ಬಾಗಿಲ ತಟ್ಟಿ
ಚಿಲಕವ ಕುಟ್ಟಿ
ಸದ್ದನು ಮಾಡುತ ಕರೆಯುವೆನು ॥

ಕಾಗದ ಬಂದಿದೆ
ವೇಗದಿ ಬನ್ನಿರಿ
ಕಾಗದ ಕೊಳ್ಳಿರಿ ಎನ್ನುವೆನು ॥

ಕಾಗದವಿದೆಯೇ
ಕಾಗದವೆಂದು
ಮಕ್ಕಳು ಕೇಳಲು ಬಾಯ್ತುಂಬ ॥

ಕಾಗದ ಹೊರಳಿಸಿ
ಕಣ್ಣುಗಳರಳಿಸಿ
ವೇಗದಿ ಹೆಸರುಗಳೋದುವೆನು ॥

ಗಂಟನು ಕಟ್ಟಿ
ಗಲ್ಲವ ತಟ್ಟಿ
ಕಾಗದವಿದೆಕೋ ಎನ್ನುವೆನು ॥

ಅಂಚೆಯ ಅಣ್ಣ
ಬಂದಿಹೆ ಚಿಣ್ಣ
ಅಂಚೆಯ ಹಂಚಲು ಮನೆಮನೆಗೆ ॥





– ನಿ.ರೇ. ಹೀರೇಮಠ

## ಹಾಡಿರಿ

ಈ ಪದ್ಯವನ್ನು ರಾಗವಾಗಿ ಹಾಡಿರಿ.

## ಉತ್ತರಿಸಿರಿ

- ಅಂಚೆಯನ್ನು ಮನೆಮನೆಗೆ ಯಾರು ಹಂಚುತ್ತಾರೆ?
- ಅಂಚೆಯ ಅಣ್ಣನ ಹೆಗಲಲ್ಲಿ ಏನು ಇರುತ್ತದೆ?
- ಮಕ್ಕಳು ಅಂಚೆ ಅಣ್ಣನಲ್ಲಿ ಏನನ್ನು ಕೇಳುತ್ತಾರೆ?

## ಪಟ್ಟಿಮಾಡಿರಿ

ನಿಮ್ಮ ಊರಿನಲ್ಲಿರುವ ವಿವಿಧ ಸಾರ್ವಜನಿಕ ಸಂಸ್ಥೆಗಳನ್ನು ಪಟ್ಟಿ ಮಾಡಿರಿ.

## ಬಯಲು ಪ್ರವಾಸ

ನಿಮ್ಮ ಶಾಲೆಯ ಸಮೀಪವಿರುವ ಯಾವುದಾದರೊಂದು ಸಾರ್ವಜನಿಕ ಸಂಸ್ಥೆಗೆ ಭೇಟಿ ನೀಡಿ ಅಲ್ಲಿಯ ಕೆಲಸಕಾರ್ಯಗಳನ್ನು ತಿಳಿಯಿರಿ.

## ಬರೆಯಿರಿ

ಈ ಕೆಳಗಿನ ಸೇವೆಗಳನ್ನು ಒದಗಿಸುವ ಸಂಸ್ಥೆಗಳ ಹೆಸರನ್ನು ಬರೆಯಿರಿ.

| ಸೇವೆಗಳು | ಸಂಸ್ಥೆಯ ಹೆಸರು |
|---|---|
| ಚಿಕಿತ್ಸೆ | ___________ |
| ಶಿಕ್ಷಣ | ___________ |
| ಕೃಷಿ ಸೌಲಭ್ಯ | ___________ |
| ಗ್ರಾಮ ಅಭಿವೃದ್ಧಿ | ___________ |

ಸಂಜೆಯಾಯಿತು. ರೇಖಾ ತನ್ನ ಗೆಳೆಯರಾದ ಶೀಲಾ, ಫಾತಿಮಾ, ಡೇವಿಡ್ ಮೊದಲಾದವರೊಂದಿಗೆ ಆಟವಾಡಲು ಹೋದಳು

# ಹುಲಿ - ದನ ಆಟ

ರೇಖಾ : ನಾವು ಇಂದು ಯಾವ ಆಟ ಆಡೋಣ?

ಡೇವಿಡ್ : ಕ್ರಿಕೆಟ್ ಆಡೋಣವೇ?

ಫಾತಿಮಾ : ಬೇಡ. ಹುಲಿ-ದನ ಆಟ ಆಗಬಹುದು. ತುಂಬ ಖುಷಿಯಾಗುತ್ತದೆ.

ರೇಖಾ : ಆಗಬಹುದು. ಆದರೆ ನನಗೆ ಆ ಆಟ ಗೊತ್ತಿಲ್ಲವಲ್ಲ!

ಡೇವಿಡ್ : ಅದಕ್ಕೇನು? ನಾವು ಹೇಳಿಕೊಡುತ್ತೇವೆ.

ರೇಖಾ : ಹಾಗಾದರೆ ನಾವೀಗ ಏನು ಮಾಡಬೇಕು?

ಫಾತಿಮಾ : ನಮ್ಮಲ್ಲಿ ಒಬ್ಬರು ಹುಲಿ ಆಗಬೇಕು. ಇನ್ನೊಬ್ಬರು ದನ ಆಗಬೇಕು. ಉಳಿದವರೆಲ್ಲ ಕೈ ಕೈ ಹಿಡಿದು ಕೋಟೆಯನ್ನು ರಚಿಸಬೇಕು.





ಡೇವಿಡ್ : ಹುಲಿಯು ಕೋಟೆಯ ಹೊರಗಿನಿಂದ ಸುತ್ತಲೂ 'ಇದು ಯಾವ ಕೋಟೆ?' ಎಂದು ಕೇಳುತ್ತಾ ಹೋಗಬೇಕು.

ಫಾತಿಮಾ : ಆಗ ಕೋಟೆ ಕಟ್ಟಿದವರು ಇದು ಕಲ್ಲಿನ ಕೋಟೆ, ಇದು ಮುಳ್ಳಿನ ಕೋಟೆ, ಇದು ಮಣ್ಣಿನ ಕೋಟೆ.... ಹೀಗೆ ಒಂದೊಂದು ಹೆಸರನ್ನು ಹೇಳಬೇಕು.

ರೇಖಾ : ಆಮೇಲೆ?

ಫಾತಿಮಾ : ಹುಲಿಯು ಕೋಟೆಯ ಬಾಗಿಲಿಗೆ ಬಂದಾಗ ದನದ ಗುರುತು ಹೇಳಿ, ಕೋಟೆಯೊಳಗೆ ಆ ದನ ಬಂದಿದೆಯೇ? ಎಂದು ಕೇಳಬೇಕು. ಕೋಟೆ ಕಟ್ಟಿದವರು 'ಬಂದಿದೆ' ಎಂದು ಉತ್ತರಿಸಬೇಕು.

ಶೀಲಾ : ಆಗ ದನವು ನನ್ನದಾಗಿದ್ದರೆ, ನನ್ನ ಕಾಲನ್ನು ಮೆಟ್ಟಿ ಓಡಲಿ ಎಂದು ಹುಲಿಯು ಹೇಳಬೇಕು.

ಡೇವಿಡ್ : ಹೀಗೆ ಮೆಟ್ಟಿದ ಕೂಡಲೇ ಹುಲಿಯು ಕೋಟೆಯೊಳಗೆ ನುಗ್ಗಿ ದನವನ್ನು ಹಿಡಿಯಲು ಪ್ರಯತ್ನಿಸಬೇಕು. ಕೋಟೆಯಾಗಿ ನಿಂತವರು ಹುಲಿಯನ್ನು ತಡೆದು ದನವನ್ನು ರಕ್ಷಿಸಲು

ಪ್ರಯತ್ನಿಸಬೇಕು.

ರೇಖಾ : ಹುಲಿಯು ಕೋಟೆಯನ್ನು ಮುರಿದು ಒಳಗೆ ಬಂದರೆ?

ಶೀಲಾ : ದನವು ಇನ್ನೊಂದು ಬದಿಯಿಂದ ಹೊರಗೆ ಓಡಿ ತಪ್ಪಿಸಬೇಕು. ಹುಲಿಯು ದನವನ್ನು ಹಿಡಿದಾಗ ಆಟವು ಮುಗಿಯುತ್ತದೆ. ಪುನಃ ಬೇರೆ ಇಬ್ಬರು ಹುಲಿ - ದನವಾಗಿ ಆಟ ಮುಂದುವರಿಸಬಹುದು.

ರೇಖಾ : ಆಹಾ! ಒಳ್ಳೆಯ ಆಟ. ಬನ್ನಿ ಬನ್ನಿ, ಆಡೋಣ.

## ಉತ್ತರಿಸಿ

- ಹುಲಿದನ ಆಟದಲ್ಲಿ ಕೋಟೆಗೆ ಸುತ್ತು ಬರುತ್ತಾ ಹುಲಿಯು ಏನೆಂದು ಕೇಳಬೇಕು?
- ಹುಲಿದನ ಆಟದಲ್ಲಿ ಕೋಟೆ ಕಟ್ಟಿದವರು ಏನು ಹೇಳಬೇಕು?
- ಹುಲಿ - ದನ ಆಟ ಯಾವಾಗ ಕೊನೆಗೊಳ್ಳುತ್ತದೆ?

## ಬರೆಯಿರಿ

ಪದಗಳನ್ನು ಅನುಕ್ರಮವಾಗಿ ಬರೆದು ವಾಕ್ಯ ರಚಿಸಿರಿ.

ಹುಲಿದನ । ಇಂದು । ಆಡೋಣ । ಆಟ । ನಾವು

ಒಬ್ಬರು । ನಮ್ಮಲ್ಲಿ । ಆಗಬೇಕು । ಹುಲಿ

ಕೋಟೆಯ । ದನ । ಇರಬೇಕು । ಒಳಗೆ

ಹೇಳಬೇಕು । ದನದ । ಹುಲಿಯು । ಗುರುತು

ದನವನ್ನು । ಆಟವು । ಹಿಡಿದಾಗ । ಹುಲಿಯು । ಮುಗಿಯುತ್ತದೆ

## ಪಟ್ಟಿಮಾಡಿರಿ

ನೀವು ಆಡುವ ಆಟಗಳನ್ನು ಪಟ್ಟಿಮಾಡಿರಿ.












ನಿಮಗೆ ತಿಳಿದಿರುವ ಆಟಗಳನ್ನು ಗ್ರಾಮೀಣ ಆಟಗಳು ಮತ್ತು ಇತರ ಆಟಗಳು ಎಂದು ವರ್ಗೀಕರಿಸಿ ಬರೆಯಿರಿ.







| ಗ್ರಾಮೀಣ ಆಟ | ಇತರ ಆಟ |
|---|---|
| | |










- ನಿಮಗೆ ಇಷ್ಟವಾದ ಆಟದ ಕುರಿತು ಬರೆಯಿರಿ.

## ಬರೆಯಿರಿ

**ಚಿತ್ರನೋಡಿ ಕಥೆ ಬರೆಯಿರಿ.**













ಹಾಡಿರಿ





# ಕಸುಬುದಾರರು

ರೈತ ಬೆಳೆಯ ಬೆಳೆಸಿ ಜನಕೆ
ದವಸಧಾನ್ಯ ಕೊಡುವನು
ಬಡಗಿ ಮರದ ಮೇಜು ಕುರ್ಚಿ
ಬೆಂಚು ಮಾಡಿಕೊಡುವನು
ಮಣ್ಣ ಮಡಿಕೆ ಕುಡಿಕೆ ಮಾಡಿ
ಕೊಡುವ ಕುಂಬಾರನು
ದರ್ಜಿ ಬಹಳ ಅಂದವಾದ
ಉಡುಪು ಹೊಲಿದು ಕೊಡುವನು
ಬಟ್ಟೆಬರೆಗಳನ್ನು ಅಗಸ
ನಿತ್ಯ ಒಗೆದುಕೊಡುವನು
ಕಸುಬಿನಿಂದ ನಾಡಸೇವೆ
ಗೈವ ಕರ್ಮಶೀಲರು
ಭೇದ ಮರೆತು ಹೊಂದಿಕೊಂಡು
ನಡೆಯುತಿರುವರೆಲ್ಲರು.



- ಸಿ.ಎಚ್. ಲಕ್ಷ್ಮಿ





# ಕಲಿಕಾ ಸಾಧನೆಗಳು

## ಕನ್ನಡ

1. ಆಲಿಸಿದ ವಿಚಾರಗಳ ಕುರಿತು ಹೇಳುವುದು.
2. ಚಿತ್ರಗಳು ಮತ್ತು ದೃಶ್ಯಗಳನ್ನು ನಿರೀಕ್ಷಿಸಿ ಸನ್ನಿವೇಶ, ಆಶಯಗಳನ್ನು ಕಂಡುಕೊಂಡು ಹೇಳುವುದು.
3. ಓದುವ ಸಾಮಗ್ರಿಗಳಿಂದ ಆಶಯಗ್ರಹಣದೊಂದಿಗೆ ಓದುವುದು ಮತ್ತು ಕಂಡುಕೊಂಡ ವಿಚಾರಗಳನ್ನು ಹಂಚಿಕೊಳ್ಳುವುದು.
4. ತಿಳಿದಿರುವ ಪದಗಳನ್ನು ಸೇರಿಸಿ ಅರ್ಥಪೂರ್ಣವಾದ ವಾಕ್ಯಗಳನ್ನು ಬರೆಯುವುದು.
5. ಚಿತ್ರಗಳನ್ನು ನಿರೀಕ್ಷಿಸಿ ಸಂಭಾಷಣೆ, ಕತೆ ಮೊದಲಾದ ವ್ಯವಹಾರರೂಪಗಳನ್ನು ಭಾವನಾತ್ಮಕವಾಗಿ ಹೇಳುವುದು ಮತ್ತು ಬರೆಯುವುದು.
6. ಸ್ವಂತ ಭಾಷಾಶೈಲಿಯನ್ನು ಉಪಯೋಗಿಸಿ ಆಶಯಗಳನ್ನು ಪ್ರತಿಬಿಂಬಿಸುವಂತೆ ವಿವರಣೆ ತಯಾರಿಸುವುದು.
7. ಆಲಿಸಿದ ಪದ್ಯಗಳನ್ನು ವೈಯಕ್ತಿಕವಾಗಿ ಮತ್ತು ಗುಂಪಾಗಿ ರಾಗ, ತಾಳ, ಲಯಬದ್ಧವಾಗಿ ಹಾಡುವುದು

## ಪರಿಸರ

1. ತನ್ನ ಊರಿನ ವಿಶೇಷತೆಗಳನ್ನು ಗುರುತಿಸಿ ಹೇಳುವುದು ಮತ್ತು ಬರೆಯುವುದು.
2. ಊರಿನಲ್ಲಿ ಹಲವು ರೀತಿಯ ಕುಟುಂಬಗಳು ಇವೆ ಎಂದು ತಿಳಿಯುವುದು.
3. ವಿವಿಧ ಕಸುಬುಗಳನ್ನು ಗುರುತಿಸಿ ಪಟ್ಟಿ ಮಾಡುವುದು.
4. ಗ್ರಾಮೀಣ ಆಟಗಳನ್ನು ಪಟ್ಟಿ ಮಾಡುವುದು.
5. ಗ್ರಾಮೀಣ ಆಟಗಳನ್ನು ಆಡುವುದು.
6. ಸಾರ್ವಜನಿಕ ಸಂಸ್ಥೆಗಳ ಪಟ್ಟಿ ಮಾಡುವುದು, ಅವುಗಳ ಪ್ರಯೋಜನಗಳನ್ನು ಹೇಳುವುದು.
7. ಗ್ರಾಮೀಣ ಆಚರಣೆಗಳ ಬಗ್ಗೆ ಹೇಳುವುದು.






## ಪಾಠ – 2

# ನಮ್ಮ ಮನೆ

ನೀಲಗಿರಿ ದಟ್ಟವಾದ ಕಾಡು. ಆ ಕಾಡಿನಲ್ಲಿ ಪ್ರಾಣಿಪಕ್ಷಿಗಳು ಅನ್ಯೋನ್ಯವಾಗಿ ಜೀವಿಸುತ್ತಿದ್ದುವು. ಆ ಕಾಡಿನ ಒಂದು ಪುಟ್ಟ ಗುಹೆಯಲ್ಲಿ ಮೂರು ಹಂದಿಮರಿಗಳು ವಾಸವಾಗಿದ್ದುವು. ಹಂದಿಮರಿಗಳು ಬೆಳೆದು ದೊಡ್ಡದಾದುವು. ಅವುಗಳಿಗೆ ಗುಹೆಯಲ್ಲಿ ಜಾಗ ಸಾಲದಾಯಿತು.





# ಮೂರು ಮನೆಗಳು

“ಈ ಗುಹೆಯಲ್ಲಿ ನಮಗೆ ಮೂವರಿಗೆ ವಾಸಿಸಲು ಸಾಧ್ಯವಿಲ್ಲ. ನಾವು ಒಂದು ಮನೆ ಕಟ್ಟುವ” ಟಿಂಕು ಹೇಳಿತು. “ಮಡಲಿನ ಮನೆಯನ್ನು ಕಟ್ಟೋಣ” ಮಿಕ್ಕು ಹೇಳಿತು. “ಬೇಡ ಬೇಡ. ಹುಲ್ಲಿನ ಮನೆಯನ್ನು ಕಟ್ಟೋಣ” ಪಿಂಕು ಹೇಳಿತು. “ಮಡಲಿನದ್ದೂ ಬೇಡ ಹುಲ್ಲಿನದ್ದೂ ಬೇಡ. ಗಟ್ಟಿಯಾದ ಇಟ್ಟಿಗೆ ಮನೆ ಕಟ್ಟೋಣ” ಟಿಂಕು ಹೇಳಿತು.

ಮಿಕ್ಕು ಮತ್ತು ಪಿಂಕು ತುಂಬಾ ಸೋಮಾರಿಗಳು. ಮಿಕ್ಕು ಮಡಲಿನ ಮನೆಯನ್ನೂ ಪಿಂಕು ಹುಲ್ಲಿನ ಮನೆಯನ್ನೂ ಎರಡೇ ದಿನಗಳಲ್ಲಿ ಕಟ್ಟಿ ಪೂರ್ತಿಗೊಳಿಸಿದುವು. ಟಿಂಕು ಇಟ್ಟಿಗೆಯಿಂದ ಗೋಡೆ ಕಟ್ಟಿ ಮನೆಯನ್ನು ನಿರ್ಮಿಸಿತು.




ದಿನಗಳು ಕಳೆದುವು. ಆ ಕಾಡಿಗೊಂದು ತೋಳ ಬಂದಿತು. ಕಾಡಿನಲ್ಲಿ ತಿರುಗಾಡುತ್ತಿದ್ದ ಹಂದಿಗಳನ್ನು ಕಂಡಾಗ ತೋಳನ ಬಾಯಲ್ಲಿ ನೀರೂರಿತು. ಅದು ಹಂದಿಗಳನ್ನು ಹಿಡಿಯಲು ಹೊಂಚು ಹಾಕಿತು. ತೋಳವನ್ನು ಕಂಡು ಹಂದಿಗಳು ಓಡಿಹೋಗಿ ತಮ್ಮ ತಮ್ಮ ಮನೆಯೊಳಗೆ ಸೇರಿಕೊಂಡವು. ತೋಳ ಮಿಕ್ಕುವಿನ ಮಡಲಿನ ಮನೆಯನ್ನು ಮುರಿದು ಒಳಹೊಕ್ಕಿತು. ಮಿಕ್ಕು ಅಲ್ಲಿಂದ ತಪ್ಪಿಸಿಕೊಂಡು ಓಡಿತು. ತೋಳ ನೇರವಾಗಿ ಪಿಂಕುವಿನ ಮನೆಗೆ ಹೋಯಿತು. ಪಿಂಕುವಿನ ಹುಲ್ಲಿನ ಮನೆಯನ್ನೂ ಮುರಿದು ಒಳಗೆ ನುಗ್ಗಿತು. ಪಿಂಕು ಹೇಗೋ ತೋಳನ ಕೈಯಿಂದ ತಪ್ಪಿಸಿಕೊಂಡು ಹೊರಗೆ ಓಡಿತು. ಪಿಂಕು ಮತ್ತು ಮಿಕ್ಕು ಓಡುತ್ತಾ ಟಿಂಕುವಿನ ಮನೆಯ ಬಳಿಗೆ ಬಂದುವು. "ಟಿಂಕೂ... ಟಿಂಕೂ... ಬಾಗಿಲು ತೆರೆ. ಆ ತೋಳ ನಮ್ಮನ್ನು ತಿನ್ನಲು ಹಿಂಬಾಲಿಸಿ ಬರುತ್ತಾ ಇದೆ." ಮಿಕ್ಕು ಹೇಳಿತು.



ಟಿಂಕು ಬಾಗಿಲು ತೆರೆಯಿತು. ಮಿಕ್ಕು ಮತ್ತು ಪಿಂಕು ಮನೆಯೊಳಗೆ ಹೋದುವು. ಟಿಂಕು ಬಾಗಿಲು ಮುಚ್ಚಿ ಚಿಲಕ ಹಾಕಿತು.

ತೋಳ ಟಿಂಕುವಿನ ಮನೆಯ ಬಳಿಗೆ ಬಂದು ಬಾಗಿಲು ತಟ್ಟಿತು. ಗೋಡೆಗೆ ಬಡಿಯಿತು. ಆದರೆ ತೋಳನಿಗೆ ಮನೆಯೊಳಗೆ ಪ್ರವೇಶಿಸಲು ಆಗಲಿಲ್ಲ. ಅದರ ಕೈಕಾಲುಗಳು ನೋಯತೊಡಗಿದುವು. "ಈ ಮನೆಯೊಳಗೆ ನುಗ್ಗಲು ಸಾಧ್ಯವಿಲ್ಲ" ಎನ್ನುತ್ತಾ ತೋಳ ನಿರಾಸೆಯಿಂದ ಹಿಂತಿರುಗಿತು. ಹೊರಗಿನಿಂದ ಸದ್ದು ಕೇಳಿಸದಿದ್ದಾಗ ಟಿಂಕು ನಿಧಾನವಾಗಿ ಕಿಟಕಿ ತೆರೆದು ಕಂಡಿತು. ತೋಳ ಹಿಂತಿರುಗಿ ಹೋಗುವುದನ್ನು ನೋಡಿದ ಟಿಂಕು, ಮಿಕ್ಕು ಮತ್ತು ಪಿಂಕು ಸಂತೋಷದಿಂದ ಕುಣಿದಾಡಿದುವು. ಕಾಡಿನ ಪ್ರಾಣಿಗಳೆಲ್ಲ ಸೇರಿ ಮಿಕ್ಕು ಮತ್ತು ಪಿಂಕುವಿಗೆ ಹೊಸ ಮನೆಗಳನ್ನು ನಿರ್ಮಿಸಿದುವು.





## ಉತ್ತರಿಸಿರಿ

- ಹಂದಿಗಳು ಯಾಕೆ ಮನೆ ಕಟ್ಟಲು ತೀರ್ಮಾನಿಸಿದುವು?
- ಮಿಕ್ಕು, ಪಿಂಕು ಮತ್ತು ಟಿಂಕು ಯಾವ ಯಾವ ಮನೆಗಳನ್ನು ನಿರ್ಮಿಸಿದುವು?
- ಮಿಕ್ಕು ಮತ್ತು ಪಿಂಕು ಟಿಂಕುವಿನ ಮನೆಯ ಕಡೆಗೆ ಯಾಕೆ ಓಡಿದುವು?
- ತೋಳನಿಗೆ ಯಾಕೆ ನಿರಾಸೆಯಾಯಿತು?
- ಕಾಡಿನ ಪ್ರಾಣಿಗಳೆಲ್ಲ ಸೇರಿ ಏನು ಮಾಡಿದುವು?



## ಬರೆಯಿರಿ

ಕತೆಯ ಪ್ರಧಾನ ಆಶಯಗಳನ್ನು ಕ್ರಮೀಕರಿಸಿ ಬರೆಯಿರಿ.

- ಹಂದಿ ಮರಿಗಳು ಮನೆ ಕಟ್ಟಲು ತೀರ್ಮಾನಿಸಿದವು.
- ಅವುಗಳು ಮಡಲಿನಿಂದ, ಹುಲ್ಲಿನಿಂದ ಹಾಗೂ ಇಟ್ಟಿಗೆಯಿಂದ ಮನೆ ನಿರ್ಮಿಸಿದವು..
- ಹಂದಿ ಮರಿಗಳನ್ನು ಕಂಡ ತೋಳ ಅವುಗಳನ್ನು ತಿನ್ನಲು ಬಂತು.
- ತೋಳ ಹುಲ್ಲಿನ ಮನೆಯನ್ನೂ ಮಡಲಿನ ಮನೆಯನ್ನೂ ಮುರಿಯಿತು.
- ತೋಳಕ್ಕೆ ಇಟ್ಟಿಗೆ ಮನೆಯನ್ನು ಮುರಿಯಲು ಸಾಧ್ಯವಾಗಲಿಲ್ಲ.
- ಹಂದಿ ಮರಿಗಳು ಇಟ್ಟಿಗೆ ಮನೆಯಲ್ಲಿ ಸುರಕ್ಷಿತವಾಗಿದ್ದವು.

## ಬರೆಯಿರಿ




ನಾನು ಗುಡಾರ (ಟೆಂಟ್). ನಾನು ಒಂದು ತಾತ್ಕಾಲಿಕ ಮನೆ. ನನ್ನಲ್ಲಿ ಕೆಲಕಾಲ ಇರಬಹುದಷ್ಟೆ! ನನ್ನನ್ನು ಕಟ್ಟಲು

_ _ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _ _

ಇತ್ಯಾದಿ ವಸ್ತುಗಳು ಸಾಕು. ನನ್ನನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು ಕೂಡಾ ಸುಲಭ.




ನನ್ನನ್ನು ನೋಡಿ. ನಾನು ಹುಲ್ಲಿನ ಮನೆ. ಈಗ ನಿಮಗೆ ನನ್ನನ್ನು ಕಾಣಲು ಕಷ್ಟಸಾಧ್ಯ. ನನ್ನ ನಿರ್ಮಾಣಕ್ಕೆ

_ _ _ _ _ _ _ _

_ _ _ _ _ _ _ _ _ _ _ _ _ _ _ _ _

ಮೊದಲಾದ ವಸ್ತುಗಳು ಇದ್ದರೆ ಸಾಕು. ಜನರ ವಾಸಕ್ಕೆ ನಾನು ಬಹಳ ಉತ್ತಮ ಎಂದು ಹೇಳುತ್ತಾರೆ.



ನಾನು ಹಂಚಿನ ಮನೆ. ನನ್ನ ಛಾವಣಿಯನ್ನು ಹಂಚಿನಿಂದ ನಿರ್ಮಿಸುತ್ತಾರೆ. ನನ್ನನ್ನು ಕಟ್ಟಲು ಬೇಕಾದ ಇತರ ವಸ್ತುಗಳೆಂದರೆ

_ _ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _ .




ಈ ಮನೆಯ ನಿರ್ಮಾಣಕ್ಕೆ ಏನೇನು ಬೇಕು ಎಂದು ಬರೆಯಿರಿ.



ನಾನು ________________

____________________

____________________

____________________




ಈ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.

## ತರತರ ಮನೆಗಳು

ಇಲ್ಲಿವೆ ನೋಡಿ
ತರತರ ಮನೆಗಳು
ಸುಲಭದಿ ಒಯ್ಯಲು
ಬಟ್ಟೆಯ ಮನೆಗಳು
ಇಲ್ಲಿವೆ ನೋಡಿ





_______________

_______________

_______________

_______________


## ಬರೆಯಿರಿ


ಒಗಟಿಗೆ ಉತ್ತರ ಬರೆಯಿರಿ.

- ಅಂಕುಡೊಂಕಿನ ಮನೆ, ಬಡಗಿ ಕಟ್ಟದ ಮನೆ
- ಕೋಣೆ ಕೋಣೆಗಳಿರುವ ನೂಲಿನ ಮನೆ
- ರೇಶ್ಮೆಯಿಂದ ಕಟ್ಟಿದ ಮನೆ, ಬಾಗಿಲಿಲ್ಲದ ಮನೆ
- ಸಿಹಿ ತುಂಬಿದ ಸಾವಿರಾರು ಕೋಣೆಗಳ ಮನೆ

## ಮನೆ ತಯಾರಿಸಿರಿ.

ಕೊಟ್ಟಿರುವ ಚಿತ್ರ ನೋಡಿ ಕಾಗದದಿಂದ ಮನೆ ನಿರ್ಮಿಸಿರಿ.





ನೀಲಗಿರಿ ಕಾಡಿನ ಬದಿಯಲ್ಲಿ ಹೊಳೆ ಹರಿಯುತ್ತಿತ್ತು. ಆ ಹೊಳೆಯ ಇನ್ನೊಂದು ಬದಿಯಲ್ಲಿ ಝೂನ್ನಿ ಎಂಬ ಹಳ್ಳಿ. ಆ ಹಳ್ಳಿಯಲ್ಲಿ ಹಲವಾರು ಮನೆಗಳಿದ್ದುವು. ಅಲ್ಲಿ ರಹೀಮ ಮತ್ತು ಅವನ ಗೆಳೆಯ ತಮ್ಮ ತಂದೆತಾಯಿಯರೊಂದಿಗೆ ವಾಸವಾಗಿದ್ದರು.


ಝೂನ್ಸಿಯ ವ್ಯಾಪಾರಿಯಾದ ಮಲ್ಲೇಶನ ತಲೆಯಲ್ಲೊಂದು ಆಲೋಚನೆ ಹೊಳೆಯಿತು. ‘ಜನರು ಮನೆಯನ್ನು ಕಟ್ಟುತ್ತಾರೆ. ಆದರೆ ಅದರ ಅಡಿಪಾಯಕ್ಕೆಂದು ಬಹಳ ಹಣ ಖರ್ಚು ಮಾಡುತ್ತಾರೆ. ಅಡಿಪಾಯಕ್ಕಾಗಿ ನೀರಿನಂತೆ ಹಣ ಚೆಲ್ಲುವುದರಿಂದ ಏನೂ ಪ್ರಯೋಜನವಿಲ್ಲ’ ಎಂದು ಯೋಚಿಸಿ ಅಡಿಪಾಯ ಹಾಕದೆಯೇ ಮನೆಯೊಂದನ್ನು ನಿರ್ಮಿಸಲು ಸಿದ್ಧನಾದನು. ಕುಶಲ ಕೆಲಸಗಾರರನ್ನು ಮನೆಕಟ್ಟಲು ನೇಮಿಸಿಕೊಂಡನು. ‘ಅಡಿಪಾಯವಿಲ್ಲದೆ ಮನೆ ನಿರ್ಮಾಣ ಬೇಡ’ ಎಂದು ಕೆಲಸಗಾರರು ಹೇಳಿದರೂ ಅವರ ಸಲಹೆ ಕೇಳಲು ಮಲ್ಲೇಶನು ಸಿದ್ಧನಿರಲಿಲ್ಲ.



ಮನೆಯ ಗೋಡೆ ಎತ್ತರಕ್ಕೆ ಏರಿದಂತೆ ಅದು ಡೊಂಕುಡೊಂಕಾಯಿತು. ಕೆಲವು ಕಡೆ ಬಿರುಕು ಬಿಟ್ಟಿತು. ಮತ್ತೆ ಕೆಲವು ಕಡೆ ಕುಸಿಯತೊಡಗಿತು. ಮಲ್ಲೇಶ ಕೆಲಸಗಾರರ ಮೇಲೆ ಸಿಟ್ಟಿಗೆದ್ದನು. ಅವರಿಗೆ ಮನೆ ಕಟ್ಟುವ ರೀತಿ ತಿಳಿದಿಲ್ಲ ಎಂದು ಹಂಗಿಸಿದನು. ಕೆಲಸಗಾರರು ಎಷ್ಟೇ ಶ್ರದ್ಧೆ ವಹಿಸಿದರೂ ಅಡಿಪಾಯವಿಲ್ಲದೆ ಗೋಡೆಗಳು ನಿಲ್ಲುವುದು ಸಾಧ್ಯವಿರಲಿಲ್ಲ. ಮಲ್ಲೇಶ ಬೇರೆ ಊರಿನಿಂದ ಕೆಲಸಗಾರರನ್ನು ಕರೆಸಿದನು. ಅವರ ಪ್ರಯತ್ನವೂ ವಿಫಲವಾಯಿತು. ಅಡಿಪಾಯಕ್ಕೆಂದು ಖರ್ಚು ಮಾಡುವ ಮೂರು ಪಟ್ಟು ಹಣ ಈಗಾಗಲೇ ಖರ್ಚಾಗಿತ್ತು. ಬೇಸರಗೊಂಡ ಮಲ್ಲೇಶನು ಕೆಲಸಗಾರರನ್ನು ಕರೆದು ಅಡಿಪಾಯ ಹಾಕಿ ಗೋಡೆ ಕಟ್ಟಲು ಹೇಳಿದನು. ಕೆಲಸಗಾರರು ಅಡಿಪಾಯ ಹಾಕಿ ಗೋಡೆ ಕಟ್ಟಿದರು.



ನೋಡುನೋಡುತ್ತಿರುವಂತೆಯೇ ಅಂದವಾದ ಮನೆ ನಿರ್ಮಾಣವಾಯಿತು. ಮಲ್ಲೇಶನಿಗೆ ತನ್ನ ಮೂರ್ಖತನಕ್ಕೆ ನಾಚಿಕೆಯಾಯಿತು.





## ಉತ್ತರಿಸಿರಿ

- ಮಲ್ಲೇಶನ ತಲೆಯಲ್ಲಿ ಯಾವ ಆಲೋಚನೆ ಹೊಳೆಯಿತು?
- ಕೆಲಸಗಾರರು ಮಲ್ಲೇಶನಿಗೆ ಏನು ಸಲಹೆ ನೀಡಿದರು?
- ಗೋಡೆ ಕುಸಿದು ಬೀಳಲು ಕಾರಣವೇನು?



## ಬರೆಯಿರಿ

ಕೊಟ್ಟಿರುವ ಅಕ್ಷರಗಳನ್ನು ಕ್ರಮೀಕರಿಸಿ ಪದ ರಚಿಸಿರಿ

| | | | | |
|---|---|---|---|---|
| ನೆ | ಮ | | | |
| ದ | ಇ | ಲ್ಲ | | |
| ಡಿ | ಪಾ | ಅ | ಯ | |

ಪದಗಳನ್ನು ಕ್ರಮೀಕರಿಸಿ ಪಾಠಕ್ಕೆ ಸೂಕ್ತವಾದ ಶೀರ್ಷಿಕೆ ಕೊಡಿರಿ.

| | | | | | | | | |
|---|---|---|---|---|---|---|---|---|
| | | | | | | | | |

- ಆವರಣದಿಂದ ಸರಿಯಾದ ಪದವನ್ನು ಆರಿಸಿ ಬಿಟ್ಟಸ್ಥಳವನ್ನು ತುಂಬಿಸಿರಿ.

ಮಲ್ಲೇಶನಿಗೆ ಹೊಸ ಆಲೋಚನೆ ______

(ಹೊಳೆಯಿತು, ಹೊಲೆಯಿತು, ಒಳೆಯಿತು)

ಮಲ್ಲೇಶ ಕೆಲಸಗಾರರ ______ ಕೇಳಲಿಲ್ಲ

(ಸಳಹೆ, ಸಲಹೆ, ಸಲಯೆ)

ಕೆಲಸಗಾರರ ಪ್ರಯತ್ನ ______ ಆಯಿತು.

(ವಿಫಳ, ವಿಪಲ, ವಿಫಲ)

ಮಲ್ಲೇಶ ಮನೆ ಒಕ್ಕಲಿನ ಸಿದ್ಧತೆ ನಡೆಸಿದನು. ಎಲ್ಲರಿಗೂ ಆಮಂತ್ರಣ ಪತ್ರಿಕೆಯನ್ನು ಹಂಚಿದನು.

## ಓದಿರಿ




ಝಾನ್ಸಿ

25-10-2014

ಪ್ರಿಯರೇ,

ತಾ. 2-11-2014ನೇ ಆದಿತ್ಯವಾರ ಬೆಳಗ್ಗೆ 10-30ಕ್ಕೆ ಸರಿಯಾಗಿ ನಾವು ಝಾನ್ಸಿ ಎಂಬಲ್ಲಿ ಹೊಸದಾಗಿ ಕಟ್ಟಿಸಿದ ಮನೆ 'ನಿಸರ್ಗ'ದ ಗೃಹಪ್ರವೇಶ ಕಾರ್ಯಕ್ರಮವನ್ನು ನಡೆಸಲು ನಿಶ್ಚಯಿಸಿರುತ್ತೇವೆ. ಈ ಶುಭ ಸಮಾರಂಭಕ್ಕೆ ತಾವೆಲ್ಲರೂ ಆಗಮಿಸಿ ಆದರಾತಿಥ್ಯವನ್ನು ಸ್ವೀಕರಿಸಿ ನಮ್ಮನ್ನು ಆಶೀರ್ವದಿಸಬೇಕಾಗಿ ಅಪೇಕ್ಷಿಸುವ,

ತಮ್ಮ ಆಗಮನಾಭಿಲಾಷಿಗಳು,

ವಿಳಾಸ :
'ನಿಸರ್ಗ' ಝಾನ್ಸಿ
ಅಂಚೆ : ಜಯಪುರ

ಮಲ್ಲೇಶ ಮತ್ತು ಮನೆಯವರು

## ಬರೆಯಿರಿ

ನಿಮ್ಮ ಮನೆಯಲ್ಲಿ ನಡೆಯಲಿರುವ ಒಂದು ಶುಭಕಾರ್ಯಕ್ರಮಕ್ಕೆ ಬಂಧುಗಳನ್ನು ಮತ್ತು ಮಿತ್ರರನ್ನು ಆಮಂತ್ರಿಸಲು ಆಮಂತ್ರಣ ಪತ್ರಿಕೆ ತಯಾರಿಸಿರಿ.



ರಹೀಮನ ಮನೆಯಲ್ಲಿ ಒಂದು ಗುಬ್ಬಿ ಗೂಡು ಕಟ್ಟಿ ವಾಸವಾಗಿತ್ತು. ರಹೀಮ ದಿನಾಲೂ ಅದಕ್ಕೆ ಕಾಳುಗಳನ್ನು ಕೊಡುತ್ತಿದ್ದನು. ಆದರೂ ಗುಬ್ಬಿಗೆ ತನ್ನ ಗೆಳೆಯ ಗೀಜಗನೊಂದಿಗೆ ಆಹಾರ ಹುಡುಕಲು ಹೋಗುವುದೆಂದರೆ ಎಲ್ಲಿಲ್ಲದ ಸಂತಸ. ಎಂದಿನಂತೆ ಗುಬ್ಬಿ ಗೀಜಗನೊಂದಿಗೆ ಆಹಾರ ಹುಡುಕಲು ಹೋಯಿತು. ಎಷ್ಟು ಹೊತ್ತಾದರೂ ಆಹಾರ ಸಿಗಲೇ ಇಲ್ಲ. ಗೀಜಗನಿಗೆ ಬೇಸರವಾಯಿತು.





# ಗೀಜಗನ ಗೂಡು

ಗೀಜಗ : ಗುಬ್ಬೀ... ಕತ್ತಲು ಕವಿಯುತ್ತಾ ಇದೆ. ಬೇಗನೆ ಗೂಡು ಸೇರೋಣ.

ಗುಬ್ಬಿ : ಅಯ್ಯೋ.... ಹೊಟ್ಟೆ ತುಂಬಲಿಲ್ಲವಲ್ಲಾ.

ಗೀಜಗ : ನೀನೇನೂ ಚಿಂತಿಸಬೇಡ. ನನ್ನ ಮನೆಯಲ್ಲಿ ಕಾಳುಗಳಿವೆ. ಅದರಿಂದ ನಿನಗೂ ಸ್ವಲ್ಪ ಕೊಡುತ್ತೇನೆ.

ಗುಬ್ಬಿ : ಆಗಲಿ. ಹೋಗೋಣ.

ಗೀಜಗ : ಗುಬ್ಬೀ.... ಬಾ ಒಳಗೆ.

ಗುಬ್ಬಿ : ಆಹಾ! ನಿನ್ನ ಮನೆ ಎಷ್ಟು ಅಂದವಾಗಿದೆ! ಬೇರೆ ಬೇರೆ ಕೋಣೆಗಳೂ ಇವೆಯಲ್ಲ. ಎರಡು ಬಾಗಿಲುಗಳೂ ಇವೆ.

ಗೀಜಗ : ನಿನ್ನ ಮನೆಯಲ್ಲಿ ಕೋಣೆಗಳಿಲ್ಲವೇ?

ಗುಬ್ಬಿ : ಇಲ್ಲ. ನನ್ನ ಮನೆಗೆ ಒಂದೇ ಕೋಣೆ. ಒಂದೇ ಬಾಗಿಲು.

ಗೀಜಗ : ಅದು ಸರಿ. ಈಗ ನಿನಗೆ ಹಸಿವಾಗುತ್ತಿಲ್ಲವೇ? ಬಾ ಕಾಳುಗಳನ್ನು ತಿಂದು ಮಲಗೋಣ.



## ಉತ್ತರಿಸಿರಿ

- ಗುಬ್ಬಿ ಯಾಕೆ ಗೀಜಗನ ಮನೆಗೆ ಹೋಯಿತು?
- ಗೀಜಗನ ಮನೆಯ ವಿಶೇಷತೆಗಳೇನು?



## ಅಭಿನಯಿಸಿರಿ

ಗುಬ್ಬಿ ಮತ್ತು ಗೀಜಗದ ನಡುವೆ ನಡೆದ ಸಂಭಾಷಣೆಯನ್ನು ಇಬ್ಬರು ಇಬ್ಬರಾಗಿ ಅಭಿನಯಿಸಿರಿ.



## ಬರೆಯಿರಿ

ಅಡಿಗೆರೆ ಎಳೆದ ಪದಗಳಿಗೆ ಬದಲಾಗಿ ಆವರಣದಿಂದ ಸೂಕ್ತ ಪದವನ್ನು ಆರಿಸಿ ಬರೆಯಿರಿ.

(ಅದು, ಅದನ್ನು, ಅದರ, ಅದಕ್ಕೆ)

ಜೇಡವೊಂದು ಅಂದವಾದ ಬಲೆಯನ್ನು ಹೆಣೆಯಿತು. ಜೇಡ ಬಲೆಯಲ್ಲಿ ಕೊಳ್ಳೆ ಹಿಡಿಯಲು ಹೊಂಚುಹಾಕಿ ಕುಳಿತಿತು. ಸ್ವಲ್ಪ ಹೊತ್ತಿನಲ್ಲಿ ಜೇಡನಿಗೆ ನಿದ್ದೆ ಬಂತು. ಅಷ್ಟರಲ್ಲಿ ಜೇಡನ ಗೆಳೆಯ ಚಿಟ್ಟೆ ಅಲ್ಲಿಗೆ ಬಂತು. ಜೇಡನನ್ನು ಕಂಡಿತು. ಜೇಡನನ್ನು ಆಟಕ್ಕೆ ಕರೆಯಿತು. ಜೇಡ ಚಿಟ್ಟೆಯೊಡನೆ ಆಟವಾಡಿತು.




**ಮನೆಯ ಕೋಣೆಗಳನ್ನು ಗುರುತಿಸಿ ಬರೆಯಿರಿ.**

ಅಂದು ಆದಿತ್ಯವಾರ. ಡೇವಿಡ್ ಬೆಳಗ್ಗೆ ಎದ್ದು ಕೈಕಾಲು ಮುಖ ತೊಳೆಯಲು  ಹೋದನು. ಅನಂತರ ಪ್ರಾರ್ಥನೆ ಮಾಡಿದನು. ಆಗ ತಾಯಿ ಅವನನ್ನು  ಕರೆದರು. ಅಕ್ಕನನ್ನೂ ತಮ್ಮನನ್ನೂ ಬರಲು ಹೇಳಿದರು. ಅಕ್ಕ  ಓದುತ್ತಿದ್ದಳು. ತಮ್ಮ  ಟಿ.ವಿ. ನೋಡುತ್ತಿದ್ದನು. ಎಲ್ಲರೂ ಬಂದರು. ಹಾಲು ಕುಡಿದರು. ಆಗ  ಮಲಗಿದ್ದ ಅಜ್ಜಿ ಕರೆದರು. ಮಕ್ಕಳಿಗೆ ಕಥೆ ಹೇಳಿದರು.




**ಈ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.**

## ಮನೆಯ ಕೋಣೆಗಳು

ಓದಲು ಬರೆಯಲು
ಓದುವ ಕೋಣೆ
ಸ್ನಾನಕೆ ಬೇಕು
ಬಚ್ಚಲು ಕೋಣೆ

– – – – – – – – – – – – – – – – – – – –

– – – – – – – – – – – – – – – – – – – –

– – – – – – – – – – – – – – – – – – – –

– – – – – – – – – – – – – – – – – – – –

ಮನೆಯಲ್ಲಿರುವುದು
ಬಗೆ ಬಗೆ ಕೋಣೆ.

ಗುಬ್ಬಿ ಮತ್ತು ರಹೀಮ ಮಾತನಾಡುತ್ತಿರುವಾಗ ಮನೆಯೊಳಗಿನಿಂದ ಅಳುವ ಸದ್ದು ಕೇಳಿಸಿತು. "ಗುಬ್ಬೀ... ಯಾರದು ಅಳುತ್ತಿರುವುದು?" ಗೀಜಗ ಕೇಳಿತು. "ಅದು ನಮ್ಮ ಮನೆಯ ಪಾಪು" ರಹೀಮ ಹೇಳಿದ.

# ನಮ್ಮ ಮನೆಯ ಸಣ್ಣ ಪಾಪ

ನಮ್ಮ ಮನೆಯಲೊಂದು ಸಣ್ಣ ಪಾಪ ಇರುವುದು
ಎತ್ತಿಕೊಳದೆ ಹೋದರದಕೆ ಕೋಪ ಬರುವುದು
ಕೋಪ ಬರಲು ಗಟ್ಟಿಯಾಗಿ ಕಿರಿಚಿಕೊಳುವುದು
ಕಿರಿಚಿಕೊಂಡು ತನ್ನ ಮೈಯ ಪರಚಿಕೊಳುವುದು
ಮೈಯ ಪರಚಿಕೊಂಡು ಪಾಪ ಅತ್ತು ಕರೆವುದು
ಅಳಲು ಕಣ್ಣಿನಿಂದ ಸಣ್ಣ ಮುತ್ತು ಸುರಿವುದು
ಪಾಪ ಅತ್ತರಮ್ಮ ತಾನೂ ಅತ್ತು ಬಿಡುವಳು
ಅಯ್ಯೋ ಪಾಪ ಎಂದುಕೊಂಡು ಮುತ್ತು ಕೊಡುವಳು
ಪಾಪ ಪಟ್ಟು ಹಿಡಿದ ಹಟವು ಸಾರ್ಥವಾಯಿತು
ಕಿರಿಚಿ ಪರಚಿ ಅಳುವುದೆಲ್ಲ ಅರ್ಥವಾಯಿತು.

– ಜಿ.ಪಿ. ರಾಜರತ್ನಂ






ಈ ಪದ್ಯವನ್ನು ರಾಗವಾಗಿ ಹಾಡಿರಿ.




- ಪಾಪನಿಗೆ ಯಾಕೆ ಕೋಪ ಬರುತ್ತದೆ?
- ಪಾಪ ಅಳುವಾಗ ಕಣ್ಣಿನಿಂದ ಏನು ಸುರಿಯುವುದು?
- ಪಾಪ ಹಿಡಿದ ಹಟವು ಹೇಗೆ ಸಾರ್ಥವಾಯಿತು?




| | |
|---|---|
| ಮನೆಯಲಿ ಒಂದು | ಮನೆಯಲೊಂದು |
| ಹೋದರೆ ಅದಕೆ | ಹೋದರದಕೆ |




ಅತ್ತರೆ ಅಮ್ಮ

ಅಳುವುದೆಲ್ಲ

## ಬರೆಯಿರಿ

ಪದ್ಯದ ಕೆಲವು ಸಾಲುಗಳನ್ನು ಕೆಳಗೆ ಕೊಡಲಾಗಿದೆ. ಆ ಸಾಲುಗಳು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿರಿ.

- _ _ _ _ _ _ _ _ _ _ _ _ _ _ _ _ _ _ _ _ _ _ _ _ _

  ಎತ್ತಿಕೊಳದೆ ಹೋದರೆ ಪಾಪನಿಗೆ ಕೋಪ ಬರುವುದು.

- _ _ _ _ _ _ _ _ _ _ _ _ _ _ _ _ _ _ _ _ _ _ _ _ _


  ಮೈಯ ಪರಚಿಕೊಂಡು ಪಾಪ ಅತ್ತು ಕರೆವುದು.

- _ _ _ _ _ _ _ _ _ _ _ _ _ _ _ _ _ _ _ _ _ _ _ _ _

  ಅಮ್ಮ ಮುತ್ತು ಕೊಡುವಳು.

### ಹೇಳಿರಿ

ಚಿತ್ರದಲ್ಲಿ ಕೊಟ್ಟಿರುವ ಮನೆಗೆಲಸಗಳನ್ನು ಗುರುತಿಸಿರಿ. ಈ ಕೆಲಸಗಳನ್ನು ನಿಮ್ಮ ಮನೆಯಲ್ಲಿ ಯಾರು ಯಾರು ಮಾಡುತ್ತಾರೆ ಎಂದು ಹೇಳಿರಿ.






ಅಂದು ರಜಾದಿನ. ಎಂದಿನಂತೆ ರಹೀಮನು ರಾಜೀವನ ಮನೆಗೆ ಆಟವಾಡಲು ಹೋದನು. ರಾಜೀವ ಮತ್ತು ಅವನ ತಂಗಿ ರಾಗಿಣಿ ತಮ್ಮ ಮನೆಯ ಪರಿಸರವನ್ನು ಸ್ವಚ್ಛಗೊಳಿಸುತ್ತಿದ್ದರು. ರಹೀಮನನ್ನು ಕಂಡ ರಾಜೀವನು "ರಹೀಮಾ... ನಾವು ಈ ಕೆಲಸ ಮಾಡಿ ಮುಗಿಸುತ್ತೇವೆ. ಸಂಜೆ ಆಡೋಣ" ಎಂದು ಹೇಳಿದನು. "ಆಗಲಿ" ಎಂದು ರಹೀಮನು ತನ್ನ ಮನೆಗೆ ಹೋದನು. ತನ್ನ ಮನೆಯ ಪರಿಸರದಲ್ಲಿ ಕಸಕಡ್ಡಿಗಳನ್ನು ಕಂಡನು. ತಾನೂ ತನ್ನ ಮನೆ ಮತ್ತು ಪರಿಸರವನ್ನು ಶುಚಿಗೊಳಿಸಿದನು. ರಾತ್ರಿ ಮಲಗುವ ಮುನ್ನ ಅಂದಿನ ದಿನಚರಿಯನ್ನು ಬರೆದನು.



06-07-2014

## ರಹೀಮನ ದಿನಚರಿ

ಇಂದು ಹೇಗೂ ರಜಾದಿನ. ಸ್ವಲ್ಪ ಹೆಚ್ಚು ಮಲಗೋಣ ಅನ್ನಿಸಿತು "ದಿನಚರಿ ನಿತ್ಯವೂ ಒಂದೇ ರೀತಿ ಇರಬೇಕು ಮಗೂ...." ಅಮ್ಮನ ಮಾತು ನೆನಪಾಗಿ ಫಕ್ಕನೆ ಎದ್ದೆನು. ಹಲ್ಲುಜ್ಜಿ ಮುಖತೊಳೆದು ಬಂದೆನು. ಸ್ನಾನ ಮಾಡಿ ತಿಂಡಿತಿಂದೆನು. ಆಗ ಆಟದ ನೆನಪಾಯಿತು. ಗೆಳೆಯನ ಮನೆಗೆ ಹೋದೆನು. ಅವನು ತಂಗಿಯ ಜೊತೆ ಅಂಗಳ ಶುಚಿಗೊಳಿಸುತ್ತಾ ಇದ್ದನು. ಕೂಡಲೇ ನನ್ನ ಮನೆ ಮನಸ್ಸಿನಲ್ಲಿ ಕಾಣಿಸಿತು. 'ಛೇ ಆಟ ಬೇಡ' ಎನ್ನುತ್ತಾ ಮನೆಗೆ ಬಂದೇಬಿಟ್ಟೆನು.


ನಮ್ಮ ಮನೆಯ ಪರಿಸರವೂ ಶುಚಿಯಾಗಿರಲಿ ಅಂತ ತೀರ್ಮಾನಿಸಿದೆನು. ಪೊರಕೆ ಹಿಡಿದು ಗುಡಿಸಿದೆನು. ಆಗ ಅಣ್ಣನೂ ಬಂದುದು ನಿಜಕ್ಕೂ ಒಳ್ಳೆಯದಾಯಿತು. ಪೊದರುಗಳನ್ನೂ, ಕಳೆಗಿಡಗಳನ್ನೂ, ಅಣ್ಣ ಬಹುಬೇಗ ಕಡಿದು ತೆಗೆದನು. ನನಗೆ ಕಷ್ಟವಾಗುತ್ತಿತ್ತು. ಅಣ್ಣನ ಜೊತೆ ಕಸಕಡ್ಡಿಗಳನ್ನು ಕಸದ ಹೊಂಡಕ್ಕೆ ಎಸೆದು ಬಂದೆನು. ಸ್ವಲ್ಪ ಆಯಾಸ ತೋರಿತು. ಆದರೇನು? ನಮ್ಮ ಮನೆಯ ಅಂಗಳವನ್ನು ಸ್ವಚ್ಛಗೊಳಿಸಿದ ಸಂತೋಷ ಅದೆಷ್ಟು!

## ಬರೆಯಿರಿ

ರಹೀಮನ ದಿನಚರಿಯನ್ನು ಓದಿದಿರಲ್ಲವೇ? ನೀವೂ ನಿಮ್ಮ ದಿನಚರಿಯನ್ನು ಬರೆಯಿರಿ.

## ಹೇಳಿರಿ

ಕೊಟ್ಟಿರುವ ಚಿತ್ರಗಳನ್ನು ನಿರೀಕ್ಷಿಸಿರಿ. ಯಾವ ಮನೆಯು ವಾಸಮಾಡಲು ಯೋಗ್ಯ? ಯಾಕೆ?




## ಹಾಡಿರಿ

# ಕತ್ತೆಯ ಮನೆ

ಕಲ್ಲು ಮಣ್ಣು
ನೀರು ಗಾರೆ
ಬೇಡ ಎಂದು ಭಾವಿಸಿ
ಹೊಸತು ಬಗೆಯ
ಮನೆಯ ಒಂದ
ಕಟ್ಟಲೆಂದು ಯೋಚಿಸಿ
ಹುಲ್ಲು ಕಡ್ಡಿ
ಸೊಪ್ಪು ಗರಿಯ
ಕತ್ತೆ ಒಟ್ಟು ಮಾಡಿತು
ಕಿಟಕಿ ಕೋಣೆ
ಗೋಡೆ ಮಾಡು
ಅಂದ ಚಂದ ಕಂಡಿತು





ಎಲ್ಲ ಪ್ರಾಣಿ
ಪಕ್ಷಿಗಳನು
ಕರೆದು ಮನೆಯ ತೋರಿತು
ಒಲೆಯ ಮೇಲೆ
ಹಾಲ ಗಡಿಗೆ
ಇರಿಸಿ ಬೆಂಕಿ ಹಚ್ಚಿತು
ಗಡಿಗೆಯಲ್ಲಿ
ಹಾಲು ಉಕ್ಕಿ
ಮೇಲೆ ಮೇಲೆ ಬಂದಿತು
ಕತ್ತೆ ತನ್ನ
ಗೆಳೆಯರಿಗೆ
ಸಿಹಿಯ ಹಾಲು ಹಂಚಿತು

## ಓದಿರಿ

# ರಾಮಯ್ಯ ಮತ್ತು ಮಕ್ಕಳು

ರಾಮಯ್ಯನು ಶ್ರೀಮಂತ ವ್ಯಾಪಾರಿಯಾಗಿದ್ದನು. ಅವನಿಗೆ ನಾಲ್ಕು ಜನ ಗಂಡು ಮಕ್ಕಳು. ಆ ನಾಲ್ಕೂ ಜನ ಮಕ್ಕಳು ಯಾವಾಗಲೂ ತಮ್ಮಲ್ಲೇ ಜಗಳವಾಡಿಕೊಳ್ಳುತ್ತಿದ್ದರು. ಒಂದು ದಿನ ರಾಮಯ್ಯ ತನ್ನ ಮಕ್ಕಳನ್ನು ಕರೆದು ಎಲ್ಲರಿಗೂ ಒಂದೊಂದು ಕೋಲನ್ನು ಕೊಟ್ಟು ಅದನ್ನು ಮುರಿಯಲು ಹೇಳಿದನು.



ಎಲ್ಲರೂ ತಮಗೆ ಸಿಕ್ಕಿದ ಒಂದೊಂದು ಕೋಲನ್ನು ಸುಲಭವಾಗಿ ಮುರಿದರು. ಆಗ ರಾಮಯ್ಯನು ಒಂದು ಕೋಲಿನ ಕಟ್ಟನ್ನು ನೀಡಿ ''ನೀವು ಸಾಧ್ಯವಾದರೆ ಈ ಕೋಲಿನ ಕಟ್ಟನ್ನು ಮುರಿಯಿರಿ'' ಎಂದನು. ಪ್ರತಿಯೊಬ್ಬರೂ ಆ ಕಟ್ಟನ್ನು ಮುರಿಯಲು ನೋಡಿದರು.



ಆದರೆ ಆಗಲೇ ಇಲ್ಲ. ಎಲ್ಲರೂ ಪರಸ್ಪರ ಮುಖ ನೋಡಿಕೊಂಡರು. ಆಗ ತಂದೆಯು "ನೋಡಿದಿರಾ? ನೀವು ಕೂಡಾ ಅಷ್ಟೇ. ನಿಮ್ಮಲ್ಲೇ ಜಗಳವಾಡಿಕೊಂಡು ಬೇರೆ ಬೇರೆಯಾಗಿ ಬಿಟ್ಟರೆ ಯಾರೇ ಆದರೂ ನಿಮ್ಮನ್ನು ಸುಲಭವಾಗಿ ಸೋಲಿಸುತ್ತಾರೆ. ಆದರೆ ಎಲ್ಲರೂ ಸೇರಿ ಒಟ್ಟಾಗಿ ಇದ್ದರೆ ನಿಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ" ಎಂದು ಹೇಳಿದರು. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಯಿತು. ಅಂದಿನಿಂದ ಅವರು ಜಗಳವಾಡಲೇ ಇಲ್ಲ.



# ಕಲಿಕಾ ಸಾಧನೆಗಳು

## ಕನ್ನಡ


1. ಆಲಿಸಿದ ಅಥವಾ ಓದಿದ ಪದ್ಯಗಳನ್ನು ವೈಯಕ್ತಿಕವಾಗಿ ರಾಗ, ತಾಳ, ಲಯ ಬದ್ಧವಾಗಿ ಹಾಡುವುದು
2. ಆಲಿಸಿದ ಪದಗಳನ್ನು ಸೇರಿಸಿ ಅರ್ಥಪೂರ್ಣವಾದ ವಾಕ್ಯಗಳನ್ನು ಬರೆಯುವುದು.
3. ಸರಳವಾದ ಒಗಟಿಗೆ ಉತ್ತರ ಕಂಡುಹಿಡಿಯುವುದು.
4. ವಾಕ್ಯರಚನಾ ಕ್ರಮವನ್ನು ಪಾಲಿಸಿಕೊಂಡು ತನ್ನ ಆಶಯವನ್ನು ಸರಳವಾಕ್ಯದಲ್ಲಿ ಬರೆಯುವುದು.
5. ಕೊಟ್ಟಿರುವ ಸಾಲುಗಳ ಲಯವನ್ನು ಪರಿಗಣಿಸಿಕೊಂಡು ಸೂಕ್ತವಾದ ಸಾಲುಗಳನ್ನು ಸೇರಿಸಿ ಬರೆಯುವುದು ಮತ್ತು ಹಾಡುವುದು.
6. ದೈನಂದಿನ ಅನುಭವಗಳಲ್ಲಿ ಮನಸ್ಸಿಗೆ ನಾಟಿದ ಘಟನೆಗಳ ಆಶಯಗಳನ್ನು ಕ್ರಮೀಕರಿಸಿ ದಿನಚರಿ ಬರೆಯುವುದು.
7. ಪೂರ್ಣವಿರಾಮ, ಪ್ರಶ್ನಾರ್ಥಕ ಚಿಹ್ನೆ, ಅರ್ಧವಿರಾಮ ಮೊದಲಾದ ಲೇಖನಚಿಹ್ನೆಗಳನ್ನು ಗುರುತಿಸಿಕೊಂಡು ಸೂಕ್ತವಾದ ರೀತಿಯಲ್ಲಿ ಓದುವುದು.
8. ಕತೆ, ಸಂಭಾಷಣೆ, ಕವಿತೆ ಮೊದವಾದವುಗಳ ಆಧಾರದಲ್ಲಿ ಪಾತ್ರಾಭಿನಯ ಮಾಡುವುದು.

## ಪರಿಸರ

1. ವಿವಿಧ ರೀತಿಯ ಮನೆಗಳಿವೆ ಎಂದು ತಿಳಿಯುವುದು.
2. ಮನೆಯ ಭಾಗಗಳನ್ನು/ಕೋಣೆಗಳನ್ನು ಪರಿಚಯ ಮಾಡಿಕೊಳ್ಳುವುದು.
3. ಮನೆ ಕೆಲಸದಲ್ಲಿ ಇರುವ ಪರಸ್ಪರ ಸಹಕಾರವನ್ನು ಅರಿಯುವುದು.
4. ಮನೆ ನಿರ್ಮಾಣಕ್ಕೆ ಬಳಸುವ ವಿವಿಧ ವಸ್ತುಗಳನ್ನು ಪಟ್ಟಿ ಮಾಡುವುದು.
5. ಉತ್ತಮ ಮನೆಯ ಲಕ್ಷಣಗಳನ್ನು ಗುರುತಿಸುವುದು.
6. ಮನೆ ಮತ್ತು ಪರಿಸರದ ಶುಚೀಕರಣದ ಆವಶ್ಯಕತೆಯನ್ನು ತಿಳಿಯುವುದು.

## ಪಾಠ – 3

# ಅಂಗೈಯಲ್ಲಿ ಆರೋಗ್ಯ



ಹೊನ್ನೂರು ಎಂಬ ಗ್ರಾಮದಲ್ಲಿ ಸುದಾಮ ಎಂಬ ಹೊಟ್ಟೆಬಾಕನಿದ್ದನು. ಎಷ್ಟು ತಿಂದರೂ ಅವನ ಹೊಟ್ಟೆ ತುಂಬುತ್ತಿರಲಿಲ್ಲ. ತಿಂದೂ ತಿಂದೂ ಅವನ ಶರೀರ ದಪ್ಪವಾಗಿತ್ತು. ಅವನ ಬೊಜ್ಜು ದೇಹ ನೋಡಿ ಎಲ್ಲರೂ ಅವನನ್ನು ಡೊಳ್ಳು ಹೊಟ್ಟೆ ಗುಂಡಣ್ಣ ಎಂದು ಗೇಲಿ ಮಾಡುತ್ತಿದ್ದರು. ಒಂದು ದಿನ ಏನಾಯಿತು ಗೊತ್ತೇ?




# ತಪ್ಪಿನ ಮನವರಿಕೆ



ಸುದಾಮನಿಗೆ ಹಸಿವೆ ಇಲ್ಲದಾಯಿತು. ಇದರಿಂದ ಅವನಿಗೆ ಸಂಕಟವಾಯಿತು. ತನ್ನ ಮನೆಯ ಮುಂದಿನ ಜಗಲಿಯಲ್ಲಿ ಕುಳಿತು ಚಿಂತಿಸತೊಡಗಿದನು. ಆಗ ರಾಮಣ್ಣ ವೈದ್ಯರು ಆ ದಾರಿಯಾಗಿ ಬಂದರು. ಸುದಾಮನ ದುಃಖ ನೋಡಿ ವೈದ್ಯರು ಕಾರಣವೇನೆಂದು ವಿಚಾರಿಸಿದರು. ಅವನು ವಿಷಯವನ್ನು ಹೇಳಿದನು.

"ಸುದಾಮಾ, ನೀನೇನೂ ಚಿಂತೆ ಮಾಡಬೇಡ. ನಿನಗೆ ನಾನು ಔಷಧಿ ಕೊಡುತ್ತೇನೆ. ಮೊದಲು ನೀನು ಕಪ್ಪೆಯೊಂದನ್ನು ಹಿಡಿದು ನನಗೆ ತಂದುಕೊಡು" ವೈದ್ಯರು ಹೇಳಿದರು. ಸುದಾಮನು ಕೂಡಲೇ ಕಪ್ಪೆಯನ್ನು ಹಿಡಿಯಲು ಹೊರಟನು.



ಪೊದೆಯೊಂದರ ಬಳಿ ಒಂದು ಕಪ್ಪೆಯನ್ನು ಕಂಡನು. ಅದನ್ನು ಅವನು ಹಿಂಬಾಲಿಸಿದನು. ಹೇಗೋ ಕಷ್ಟಪಟ್ಟು ಆ ಕಪ್ಪೆಯನ್ನು ಹಿಡಿದು ವೈದ್ಯರಿಗೆ ಕೊಟ್ಟನು. "ವೈದ್ಯರೇ, ಹಸಿವೆ ಆಗುವ ಔಷಧಿಯನ್ನು ಈಗಲೇ ಕೊಟ್ಟು ಬಿಡಿ" ಎಂದು ಹೇಳಿದನು.

ಆಗ ವೈದ್ಯರು "ಸುದಾಮಾ, ಈ ಕಪ್ಪೆಯನ್ನು ಮಾತ್ರ ತಂದರೆ ಸಾಲದು. ಒಂದು ಕೋಳಿಯನ್ನೂ ತಂದುಕೊಡು" ಎಂದರು.


ಸುದಾಮನು ಕೋಳಿಯನ್ನು ಹಿಡಿಯಲು ಹೊರಟನು. ಅಂಗಳದ ಬಳಿ ಕೋಳಿಯನ್ನು ಕಂಡನು. ಅದನ್ನು ಹಿಡಿಯಲು ಹೋದನು. ಆದರೆ ಅವನನ್ನು ನೋಡಿ ಕೋಳಿ ಹೆದರಿ ದೂರ ಓಡಿತು. ಬಹಳ ಕಷ್ಟಪಟ್ಟು ಅದನ್ನು ಹಿಡಿದನು. "ವೈದ್ಯರೇ, ನೀವು ಹೇಳಿದಂತೆ ಕೋಳಿಯನ್ನು ಹಿಡಿದು ತಂದಿದ್ದೇನೆ. ಈಗಲಾದರೂ ಹಸಿವಿನ ಮದ್ದನ್ನು ಕೊಡಿ" ಎಂದನು.





ಅವನ ಮಾತು ಕೇಳಿದ ವೈದ್ಯರು ನಗುತ್ತಾ "ಸುದಾಮಾ, ಔಷಧಿ ತಯಾರಿಸಲು ಇನ್ನು ಬೇಕಾಗಿರುವುದು ಒಂದೇ ಒಂದು ನವಿಲು. ಅದನ್ನು ತಂದುಕೊಟ್ಟರೆ ಔಷಧಿ ತಯಾರಿಸಿ ಕೊಡುತ್ತೇನೆ" ಎಂದರು. ಇದನ್ನು ಕೇಳಿ ಸುದಾಮನಿಗೆ ಬೇಸರವಾಯಿತು. ಆದರೂ ಉಪಾಯವಿಲ್ಲದೆ ನವಿಲನ್ನು ಹುಡುಕುತ್ತಾ ಹೊರಟನು. ನವಿಲಿಗಾಗಿ ಕಾಡಿನಲ್ಲಿಡೀ ಹುಡುಕಾಡಿದನು. ಕೊನೆಗೂ ನವಿಲೊಂದನ್ನು ಪತ್ತೆ ಹಚ್ಚಿದನು. ಅದನ್ನು ಹಿಡಿಯಲು ಹೋದನು. ಆದರೆ ಅವನಿಗೆ ಅದನ್ನು ಹಿಡಿಯಲು ಸಾಧ್ಯವಾಗಲೇ ಇಲ್ಲ.





ಬಳಲಿದ ಸುದಾಮನು ವೈದ್ಯರ ಬಳಿಗೆ ಹೋದನು. ವೈದ್ಯರು ತಿಂಡಿ ತಿನ್ನುತ್ತಿದ್ದರು. ಸುದಾಮನು “ವೈದ್ಯರೇ, ಈಗ ನನಗೆ ತುಂಬಾ ಹಸಿವೆಯಾಗುತ್ತಿದೆ. ಇನ್ನು ಔಷಧಿಯ ಅಗತ್ಯ ಇದೆಯೇ?” ಎಂದು ಕೇಳಿದನು. ಆಗ ವೈದ್ಯರು “ಇಲ್ಲ. ಇನ್ನು ನಿನಗೆ ಹಸಿವು ಬರಿಸುವ ಔಷಧಿಯ ಅಗತ್ಯವಿಲ್ಲ. ನಾನು ಹೇಳಿದುದನ್ನೆಲ್ಲಾ ತರಲು ಹೋದಾಗ ನಿನ್ನ ದೇಹಕ್ಕೆ ವ್ಯಾಯಾಮ ಸಿಕ್ಕಿತು. ನಿನಗೆ ಹಸಿವಾಯಿತು. ಯಾರೇ ಆಗಲಿ, ಕಷ್ಟಪಟ್ಟು ಕೆಲಸ ಮಾಡಿದರೆ ಅವರ ಆರೋಗ್ಯ ಚೆನ್ನಾಗಿರುತ್ತದೆ. ಮಾತ್ರವಲ್ಲ ಅತಿಯಾಗಿ ತಿನ್ನಬಾರದು” ವೈದ್ಯರು ಹೇಳಿದರು. ಸುದಾಮನಿಗೆ ತನ್ನ ತಪ್ಪಿನ ಅರಿವಾಯಿತು. ಅಂದಿನಿಂದ ಅವನು ಸೋಮಾರಿಯಾಗಿ ಮನೆಯಲ್ಲಿ ಕುಳಿತಿರದೆ ತನ್ನ ಕೆಲಸಗಳನ್ನು ತಾನೇ ಮಾಡಲು ತೊಡಗಿದನು.





## ಉತ್ತರಿಸಿ

- ಸುದಾಮನನ್ನು ಎಲ್ಲರೂ ಗೇಲಿ ಮಾಡುತ್ತಿದ್ದುದು ಯಾಕೆ?
- ಸುದಾಮನಿಗೆ ಯಾಕೆ ಸಂಕಟವಾಯಿತು?
- ವೈದ್ಯರು ಸುದಾಮನಲ್ಲಿ ಏನೇನು ತರಲು ಹೇಳಿದರು?
- ಸುದಾಮನಿಗೆ ಹಸಿವೆಯಾದುದು ಹೇಗೆ?



## ಬರೆಯಿರಿ

**ಅಡಿಗೆರೆ ಎಳೆದ ಪದಗಳ ವಿರುದ್ಧ ಅರ್ಥವಿರುವ ಪದಗಳನ್ನು ಆವರಣದಿಂದ ಆಯ್ದು ಬರೆಯಿರಿ.**

(ದೂರ, ಮುಂದಿನ, ತಪ್ಪು, ಬೇಸರ, ಕಷ್ಟ)

- ಸುದಾಮನಿಗೆ ಅತ್ತಿತ್ತ ನಡೆದಾಡಲು ಸುಲಭವಾಯಿತು.
- ............................................................................
- ಸುದಾಮನು ಮನೆಯ ಹಿಂದಿನ ಜಗಲಿಯಲ್ಲಿ ಕುಳಿತಿದ್ದನು.
- ............................................................................
- ಸುದಾಮನಿಗೆ ತಾನು ಮಾಡುತ್ತಿದ್ದುದು ಸರಿ ಅನಿಸಿತು.
- ............................................................................
- ನವಿಲನ್ನು ತರಲು ಹೇಳಿದಾಗ ಸುದಾಮನಿಗೆ ಸಂತೋಷವಾಯಿತು.
- ............................................................................
- ಸುದಾಮನು ನವಿಲನ್ನು ಹುಡುಕುತ್ತ ಬಹಳ ಹತ್ತಿರ ಹೋದನು.
- ............................................................................




ಆವರಣದಿಂದ ಸರಿಯಾದ ಪದವನ್ನು ಆರಿಸಿ ವಾಕ್ಯಪೂರ್ತಿಗೊಳಿಸಿರಿ.

- ಒಂದು ದಿನ ಸುದಾಮನಿಗೆ __________ ಆಯಿತು. (ಹಸಿವೆ, ಅಸಿವೆ, ಹಶಿವೆ)
- ಸುದಾಮನಿಗೆ ಬಹಳ ________ ಆಯಿತು. (ದುಖಃ, ದುಃಖ, ದುಖ)
- ಸುದಾಮನು ವೈದ್ಯರ ಬಳಿ ________ ಕೇಳಿದನು. (ಔಶಧಿ, ಔಸದಿ, ಔಷಧಿ)
- ಸುದಾಮನ ದೇಹಕ್ಕೆ ________ ಸಿಕ್ಕಿತು. (ವ್ಯಯಾಮ, ವ್ಯಾಯಾಮ, ವ್ಯಾಯ್ಯಾಮ)
- ಕಷ್ಟಪಟ್ಟು ಕೆಲಸ ಮಾಡಿದರೆ ________ ಚೆನ್ನಾಗಿರುತ್ತದೆ. (ಆರೋಗ್ಯ, ಅರೋಗ್ಯ, ಆರೊಗ್ಯ)




ಪದ ಹುಡುಕಿ ಬರೆಯಿರಿ.

- ದಿನಗಳಿಗೆ ಒಮ್ಮೆ – ದಿನಗಳಿಗೊಮ್ಮೆ
- ಸಂಕಟ ಆಯಿತು – ________________
- ನವಿಲು ಒಂದನ್ನು – ________________
- ಹಸಿವೆ ಆಗುತ್ತದೆ – ________________
- ಸಾಧ್ಯ ಆಗಲಿಲ್ಲ – ________________

ಹಾಡಿರಿ

# ನೆನಪಿರಲಿ



ನಸುಕಿನಲ್ಲಿ ಏಳಬೇಕು
ಇದನು ರೂಢಿ ಮಾಡಿಕೊ
ದಿನದ ಪಾಠ ಮನನ ಮಾಡಿ
ಮರೆಯದಂತೆ ನೋಡಿಕೊ

ಉಗುರು ಉದ್ದ ಬೆಳೆಸಬೇಡ
ವಾರಕೊಮ್ಮೆ ತೆಗೆಯಿಸು
ಎರಡು ಹೊತ್ತು ಸ್ನಾನ ಮಾಡಿ
ಮೈಯ ಕೊಳೆಯ ತೊಲಗಿಸು

ಬೀದಿ ಬದಿಯ ತಿಂಡಿ ಏಕೆ?
ಅದನು ನೋಡಬೇಡವೊ
ಎಣ್ಣೆಯಲ್ಲಿ ಕರಿದ ತಿಂಡಿ
ತುಂಬ ತಿನ್ನಬೇಡವೊ

ಶುಭ್ರ ಉಡುಪು ಧರಿಸಬೇಕು
ಕೊಳೆಯ ಮಾಡಬೇಡವೊ
ಮನೆಯ ಒಳಗೆ ಹೊರಗೆ ಕೂಡ
ಕಸವ ಚೆಲ್ಲಬೇಡವೊ





ಹಂಚಿ ತಿನ್ನುವಂಥ ರೀತಿ
ಯನ್ನು ನೀನು ಕಲಿತುಕೊ
ಮಿತಿಯ ಮೀರಿ ತಿನಲು ಕೇಡು
ಬಂತು ಎಂದೆ ತಿಳಿದುಕೊ

– ಸಿ.ಎಚ್. ಗೋಪಾಲ ಭಟ್ಟ, ಚುಕ್ಕಿನಡ್ಕ

## ಹಾಡಿರಿ

ಈ ಪದ್ಯವನ್ನು ರಾಗವಾಗಿ ಹಾಡಿರಿ.

## ಉತ್ತರಿಸಿರಿ

ಈ ಪದ್ಯದಲ್ಲಿ ಹೇಳಿರುವ ಆರೋಗ್ಯ ಅಭ್ಯಾಸಗಳು ಯಾವುವು?

_ _ _ _ _ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _ _ _ _ _

## ಬರೆಯಿರಿ

ಪದ್ಯದಿಂದ ಪ್ರಾಸಪದ ಹುಡುಕಿ ಬರೆಯಿರಿ.

**ತೆಗೆಯಿಸು -**

**ಮಾಡಿಕೊ -**

**ಕಲಿತುಕೊ -**

**ಮಾಡಬೇಡವೊ-**

ಅಂದು ಸೋಮವಾರ.

ಸುದಾಮನು ಶಾಲೆಗೆ ಬಂದನು. ಗೆಳೆಯ ರಹೀಮನೂ ಬಂದನು. ಎಲ್ಲ ಮಕ್ಕಳೂ ತರಗತಿಗೆ ಬಂದರು. ಯಾಮಿನಿ ಟೀಚರು ಬಂದು ಹಾಜರಿ ಕರೆದರು. ಎಲ್ಲ ಮಕ್ಕಳನ್ನೂ ಮಾತನಾಡಿಸಿದರು. ಟೀಚರು ರಹೀಮನ ಬಳಿಗೆ ಬಂದರು. ಅವನ ಕಣ್ಣುಗಳು ಕೆಂಪಾಗಿದ್ದುವು.



## ಓದಿರಿ

ಟೀಚರ್ : ಅರೆ ರಹೀಮ... ನಿನ್ನ ಕಣ್ಣು ಕೆಂಪಾಗಿದೆಯಲ್ಲ?

ರಹೀಮ : ಹೌದು ಟೀಚರ್, ಎರಡು ದಿನಗಳಿಂದ ನನಗೆ ಕಣ್ಣು ನೋವಾಗುತ್ತಿದೆ. ವಿಪರೀತ ಉರಿಯೂ ಇದೆ. ಕಣ್ಣಿನಲ್ಲಿ ಆಗಾಗ ನೀರು ಸುರಿಯುತ್ತದೆ. ಬೆಳಗ್ಗೆ ಏಳುವಾಗ ಕಣ್ಣಿನ ರೆಪ್ಪೆಗಳನ್ನು ಬಿಡಿಸಲು ಕಷ್ಟವಾಗುತ್ತದೆ.

ಟೀಚರ್ : ಓಹೋ...ನಿನಗೆ ಕೆಂಗಣ್ಣು ಬಂದಿದೆ. ನೋಡು ಮಗೂ, ಕಣ್ಣಿಗೆ ಔಷಧಿ ಹಾಕಲು ತಾಯಿ, ತಂದೆಗೆ ಹೇಳು. ನೀನು ಶಾಲೆಯಲ್ಲೇ ಇದ್ದರೆ ನಿನ್ನ ಗೆಳೆಯರಿಗೂ ಕೆಂಗಣ್ಣು ಬರಬಹುದು. ಈಗ ನೀನು ಮನೆಗೆ ಹೋಗು. ನೋವು ಕಡಿಮೆಯಾದ ಮೇಲೆ ಶಾಲೆಗೆ ಬಾ.

ರಹೀಮ : ಟೀಚರ್, ನಾನು ಮನೆಗೆ ಹೋಗುತ್ತೇನೆ. ಕಣ್ಣು ನೋವು ಕಡಿಮೆ ಆದ ಮೇಲೆ ಶಾಲೆಗೆ ಬರುತ್ತೇನೆ.

ಟೀಚರ್ : ಕೆಂಗಣ್ಣು ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ರೋಗವಾಗಿದೆ. ಇಂತಹ ರೋಗಗಳನ್ನು ಸಾಂಕ್ರಾಮಿಕ ರೋಗ ಎಂದು ಹೇಳುತ್ತಾರೆ.

ಶಾಲಿನಿ : ಟೀಚರ್, ನನ್ನ ಅಣ್ಣ ಹೊಟ್ಟೆ ನೋವು ಎಂದು ಹೇಳುತ್ತಿದ್ದನು ಅದು ನನಗೂ ಬರಬಹುದೆ?

ಟೀಚರ್ : ಇಲ್ಲ. ಎಲ್ಲ ರೋಗಗಳೂ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ.

ರಹೀಮ : ಆಯಿತು ಟೀಚರ್, ಕಣ್ಣು ನೋವು ಕಡಿಮೆ ಆದ ಮೇಲೆ ಶಾಲೆಗೆ ಬರುತ್ತೇನೆ.




- ರಹೀಮನಿಗೆ ಯಾವ ರೋಗ ಬಂದಿದೆ?
- ಸಾಂಕ್ರಾಮಿಕ ರೋಗ ಎಂದರೇನು?





**ಕೋಣೆಯಲ್ಲಿರುವ ರೋಗಗಳ ಹೆಸರುಗಳನ್ನು ಹುಡುಕಿ ಬರೆಯಿರಿ.**

| | | | | | | |
|---|---|---|---|---|---|---|
| ಆ | ಹ | ಳ | ದಿ | ಜ್ವ | ರ | ಡೆಂ |
| ನೆ | ರಿ | ಕೆಂ | ಗ | ಣ್ಣು | ಡ | ಗ್ಯು |
| ಕಾ | ಲ | ರಾ | ಪ | ಕೆ | ಳ | ಜ್ವ |
| ಲು | ಬ | ತ | ಅ | ಪ | ಸ್ಮಾ | ರ |
| ಯಾ | ಮ | ಲೆ | ಶೂ | ಪೋ | ಲಿ | ಯೋ |
| ಚಿ | ಕು | ನ್ | ಗು | ನ್ಯಾ | ರ | ಗ |
| ಚ | ತಿ | ವು | ವಾಂ | ತಿ | ಭೇ | ದಿ |



## ಬರೆಯಿರಿ

**ಒಗಟಿಗೆ ಉತ್ತರ ಬರೆಯಿರಿ.**



ಕಪ್ಪುಂಟು ಕಾಗೆಯಲ್ಲ
ಬಿಳುಪುಂಟು ಬೆಣ್ಣೆಯಲ್ಲ
ನೀರುಂಟು ಬಾವಿಯಲ್ಲ
ಮುಚ್ಚಳವುಂಟು ಪಾತ್ರೆಯಲ್ಲ
ನಾನು ಯಾರು?

**ಒಗಟು ಬರೆಯಿರಿ.**



.........................................................

.........................................................

.........................................................

.........................................................

ಕಿವಿ

## ಓದಿರಿ

# ಮಲೇರಿಯಾ

ಮಲೇರಿಯಾ ಒಂದು ಸಾಂಕ್ರಾಮಿಕ ರೋಗವಾಗಿದೆ. ಅನಾಫಿಲಿಸ್ ಎಂಬ ಹೆಣ್ಣು ಸೊಳ್ಳೆಯಿಂದ ಈ ರೋಗ ಹರಡುತ್ತದೆ. ಮಲೇರಿಯಾ ರೋಗ ಇರುವ ವ್ಯಕ್ತಿಗೆ ಕಚ್ಚಿದ ಸೊಳ್ಳೆಯು ಇನ್ನೊಬ್ಬರನ್ನು ಕಚ್ಚಿದಾಗ ಅವರಿಗೆ ಈ ರೋಗ ಬರುವುದು. ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಅತಿಯಾದ ಚಳಿ ಮತ್ತು ನಡುಕ, ಆಗಾಗ ವಾಂತಿ, ಸಂದುಸಂದುಗಳಲ್ಲಿ ನೋವು ಈ ರೋಗದ ಲಕ್ಷಣಗಳಾಗಿವೆ. ಸೊಳ್ಳೆ ಕಚ್ಚಿ ಹತ್ತರಿಂದ ಹದಿನೈದು ದಿನಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಲಕ್ಷಣಗಳು ಕಂಡು ಬಂದ ಕೂಡಲೇ ರೋಗಿಗೆ ವೈದ್ಯರಿಂದ ಔಷಧಿಕೊಡಿಸಬೇಕು.

ಸೊಳ್ಳೆಗಳನ್ನು ನಿಯಂತ್ರಿಸುವುದರಿಂದ ಈ ರೋಗವು ಹರಡದಂತೆ ತಡೆಗಟ್ಟಬಹುದು. ಅಲ್ಲಲ್ಲಿ ನೀರು ಕಟ್ಟಿ ನಿಲ್ಲದಂತೆ ನೋಡಿಕೊಳ್ಳಬೇಕು. ಮನೆಯ ನೀರಿನ ಟ್ಯಾಂಕನ್ನು ವಾರಕ್ಕೊಮ್ಮೆ ತೊಳೆಯಬೇಕು. ಹೂಕುಂಡ, ಗೆರಟೆ, ಪಾತ್ರೆಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಮಲಗುವಾಗ ಸೊಳ್ಳೆಕಚ್ಚದಂತೆ ಸೊಳ್ಳೆಪರದೆಯನ್ನು ಕಟ್ಟಬೇಕು. ಈ ರೀತಿ ಮುಂಜಾಗರೂಕತೆಯ ಕ್ರಮಗಳಿಂದ ರೋಗ ಹರಡುವುದನ್ನು ತಡೆಗಟ್ಟಬಹುದು.



## ಉತ್ತರಿಸಿರಿ

- ಮಲೇರಿಯಾವು ಹೇಗೆ ಹರಡುತ್ತದೆ?
- ಮಲೇರಿಯಾದ ಲಕ್ಷಣಗಳೇನು?
- ಮಲೇರಿಯಾವನ್ನು ಹೇಗೆ ತಡೆಗಟ್ಟಬಹುದು?

## ಬರೆಯಿರಿ


ಆವರಣದಿಂದ ಸೂಕ್ತವಾದ ಪದವನ್ನು ಆರಿಸಿ ಖಾಲಿಸ್ಥಳದಲ್ಲಿ ಬರೆಯಿರಿ.

(ಅವಳು, ಅವಳಲ್ಲಿ, ಅವಳಿಗೆ, ಅವಳನ್ನು, ಅವಳ)

ಜೋಸ್ನಾ ಶಾಲೆ ಬಿಟ್ಟು ಮನೆಗೆ ಹೊರಟಳು. ಆಗ ಜೋರಾಗಿ ಮಳೆ ಸುರಿಯತೊಡಗಿತು. ________ ಕೊಡೆ ಇರಲಿಲ್ಲ. ________ ಮಳೆಯಲ್ಲಿ ನೆನೆಯುತ್ತಾ ಮನೆಗೆ ತಲುಪಿದಳು. ________ ಅಮ್ಮ ಬೈರಾಸು ತಂದು ಒರೆಸಿದಳು. ರಾತ್ರಿ ________ ಜ್ವರ ಬಂತು. ಅಪ್ಪ ________ ವೈದ್ಯರ ಬಳಿಗೆ ಕರೆದುಕೊಂಡು ಹೋದರು. ವೈದ್ಯರು ಔಷಧಿ ಕೊಟ್ಟರು. ಎರಡು ದಿನ ಕಳೆದಾಗ ಜ್ವರ ಕಡಿಮೆಯಾಯಿತು.


### ಸ್ಟೆತಸ್ಕೋಪ್ ತಯಾರಿಸಿರಿ.

ಸ್ಟೆತಸ್ಕೋಪನ್ನು ತಯಾರಿಸಿ ನಿಮ್ಮ ಗೆಳೆಯನ ಹೃದಯ ಬಡಿತವನ್ನು ಅಳೆಯಿರಿ.



## ಆಡಿರಿ.

**ಸ್ನೇಹಿತರೊಂದಿಗೆ ಸೇರಿ ಕೆಳಗಿನ ಆಟವನ್ನು ಆಡಿರಿ.**




## ಚರ್ಚಿಸಿರಿ

- **ಏಣಿ ಇರುವ ಕೋಣೆಗೆ ತಲುಪಿದಾಗ ಮೇಲೆ ಹೋಗುವಿರಿ ಯಾಕೆ?**
- **ಹಾವಿನ ಬಾಯಿ ಇರುವ ಕೋಣೆಗೆ ತಲುಪಿದಾಗ ಕೆಳಗೆ ಬರುವಿರಿ ಯಾಕೆ?**
- **ಉತ್ತಮ ಆರೋಗ್ಯ ಅಭ್ಯಾಸಗಳನ್ನು ಪಾಲಿಸುವುದರಿಂದ ಇರುವ ಪ್ರಯೋಜನಗಳೇನು?**

## ಬರೆಯಿರಿ

**ಕೆಳಗೆ ಕೊಟ್ಟಿರುವವುಗಳನ್ನು ವ್ಯಕ್ತಿ ಶುಚಿತ್ವ ಮತ್ತು ಪರಿಸರ ಶುಚಿತ್ವ ಎಂಬುದಾಗಿ ವರ್ಗೀಕರಿಸಿ ಕೋಣೆಯಲ್ಲಿ ಬರೆಯಿರಿ.**

- ಪ್ರತಿದಿನವೂ ಹಲ್ಲು ಉಜ್ಜುವುದು.
- ಆಹಾರ ಸೇವಿಸುವ ಮೊದಲು ಕೈಗಳನ್ನು ಚೆನ್ನಾಗಿ ತೊಳೆಯುವುದು.
- ಪರಿಸರದಲ್ಲಿ ಬಿದ್ದಿರುವ ಕಸಕಡ್ಡಿಗಳನ್ನು ಹೆಕ್ಕುವುದು.
- ಪ್ರತಿದಿನವೂ ಸ್ನಾನ ಮಾಡುವುದು.
- ಅಂಗಳ ಗುಡಿಸುವುದು.
- ಅಲ್ಲಲ್ಲಿ ನೀರು ಕಟ್ಟಿ ನಿಲ್ಲದಂತೆ ನೋಡಿಕೊಳ್ಳುವುದು.
- ವಾರಕ್ಕೊಮ್ಮೆ ಉಗುರು ತೆಗೆಯುವುದು.
- ಶೌಚಾಲಯಗಳನ್ನು ಶುಚಿಗೊಳಿಸುವುದು.

| ವ್ಯಕ್ತಿ ಶುಚಿತ್ವ | ಪರಿಸರ ಶುಚಿತ್ವ |
| --- | --- |
| • | • |
| • | • |
| • | • |
| • | • |

## ಬರೆಯಿರಿ

ಕೊಟ್ಟಿರುವ ಚಿತ್ರಗಳಲ್ಲಿ ಶುಚೀಕರಣಕ್ಕೆ ಉಪಯೋಗಿಸುವ
✓ ಉಪಕರಣಗಳಿಗೆ ಗುರುತು ಹಾಕಿರಿ.



## ಬರೆಯಿರಿ

ಅಕ್ಷರಗಳನ್ನು ಕ್ರಮೀಕರಿಸಿ ಪದ ಬರೆಯಿರಿ.

| | | |
|---|---|---|
| ತ | ರ | ಭಾ |
| ಭಾ | ಗ್ಯ | ಸೌ |
| ನಂ | ದ | ಆ |
| ಗ್ಯ | ಭಾ | ಶ್ರೀ |
| ಣಿ | ರೋ | ಹಿ |
| ವೇ | ವಿ | ಕ |

ಕೋಣೆಗಳಲ್ಲಿ ಉರುಟು ಹಾಕಿರುವ ಅಕ್ಷರಗಳನ್ನು ಕ್ರಮೀಕರಿಸಿ ಆರೋಗ್ಯಕ್ಕೆ ಸಂಬಂಧಿಸಿದ ಗಾದೆಮಾತನ್ನು ಕಂಡುಹಿಡಿಯಿರಿ.

## ಬರೆಯಿರಿ

ಆರೋಗ್ಯಕ್ಕೆ ಸಂಬಂಧಿಸಿದ ಗಾದೆ ಮಾತುಗಳನ್ನು ಬರೆಯಿರಿ.




**ಕೆಳಗೆ ಕೆಲವು ಆರೋಗ್ಯ ಅಭ್ಯಾಸಗಳನ್ನು ಕೊಡಲಾಗಿದೆ. ಅವುಗಳಲ್ಲಿ ನೀವು ಪಾಲಿಸುವವುಗಳ ಎದುರು ✓ ಗುರುತು ಹಾಕಿರಿ.**

- ಬೆಳಗ್ಗೆ ಆಹಾರಸೇವನೆಯ ಮೊದಲು ಮತ್ತು ರಾತ್ರಿ ಆಹಾರ ಸೇವನೆಯ ಬಳಿಕ ಹಲ್ಲುಜ್ಜುವುದು. ☐
- ದಿನವೂ ಸ್ನಾನ ಮಾಡುವುದು. ☐
- ಹೊರಗೆ ಹೋಗುವಾಗ ಪಾದರಕ್ಷೆಯನ್ನು ಧರಿಸುವುದು. ☐
- ಕುದಿಸಿ ತಣಿಸಿದ ನೀರನ್ನು ಕುಡಿಯುವುದು. ☐
- ಆಟವಾಡಿದ ಬಳಿಕ ಕೈಕಾಲು ಮುಖ ತೊಳೆಯುವುದು. ☐
- ಉಗುರು ಬೆಳೆದಾಗ ಕತ್ತರಿಸುವುದು. ☐
- ಆಹಾರ ವಸ್ತುಗಳನ್ನು ಮುಚ್ಚಿರಿಸುವುದು. ☐
- ಆಹಾರಸೇವನೆಗೆ ಸ್ವಚ್ಛವಾದ ಪಾತ್ರೆಗಳನ್ನು ಉಪಯೋಗಿಸುವುದು. ☐
- ಶುಚಿಯಾದ ಬಟ್ಟೆ ಧರಿಸುವುದು. ☐
- ಹಣ್ಣುಗಳನ್ನು ತೊಳೆದು ತಿನ್ನುವುದು. ☐

## ಬರೆಯಿರಿ

ಚಿತ್ರನೋಡಿ ಕಥೆ ಬರೆಯಿರಿ



ಹಾಡಿರಿ

# ಆರೋಗ್ಯವೇ ಭಾಗ್ಯ

ಕಾಸಿಸೋಸಿ ಕುಡಿಯಬೇಕು
ನಿತ್ಯ ನೀರನು
ತಿನ್ನಬೇಕು ಬಿಸಿ ಅನ್ನ
ತಾಜಾ ಹಣ್ಣನು

ಹಳಸಿದನ್ನ ಕೊಳೆತ ಹಣ್ಣು
ತಿನಲು ಬಾರದು
ತೆರೆದು ಇಟ್ಟ ತಿಂಡಿ ತಿನಸು
ಮುಟ್ಟಬಾರದು

ಕುಡಿವ ನೀರಿನಲ್ಲಿ ಹೊಲಸು
ಮಾಡಬಾರದು
ಕೊಚ್ಚೆ ಕೊಳಚೆ ಸನಿಹದಲ್ಲಿ
ಇರಲೆ ಬಾರದು

ಕೊಳಕು ನೀರು ಹಳಸಿದನ್ನ
ರೋಗ ಬರಲು ಕಾರಣ
ಕರುಳುಬೇನೆ, ವಾಂತಿಭೇದಿ
ಬಂದರಲ್ಲಿ ಮಾರಣ


ಆರೋಗ್ಯವೇ ಭಾಗ್ಯವೆಂದು
ಅರಿತು ನಡೆವುದು
ತಪ್ಪದಲ್ಲಿ ಸ್ವಚ್ಛತೆಯ
ಕಾಯ್ದುಕೊಳುವುದು.

– ಕಾಂಬ್ಳೆ ಶರಣಪ್ಪ

ಓದಿರಿ

# ಜಾಣನರಿ

ಸೋಮನ ಕಾಡಿಗೆ ಶೇರುಸಿಂಹ ರಾಜನಾಗಿತ್ತು. ಒಂದು ಬಾರಿ ಅದಕ್ಕೆ ಯಾವುದೋ ಕಾಯಿಲೆ ಉಂಟಾಯಿತು. ಅದು ತನ್ನ ಗುಹೆಯಿಂದ ಹೊರಬರದೆ ಒಂದು ವಾರ ಕಳೆಯಿತು. ಅದು ಅನಾರೋಗ್ಯದಿಂದ ನರಳುತ್ತಾ ಗುಹೆಯಲ್ಲಿ ಮಲಗಿಕೊಂಡಿತ್ತು. ಕಾಡಿನ ಪ್ರಾಣಿಗಳೆಲ್ಲಾ ಗುಹೆಗೆ ಬಂದು ರಾಜನ ಅನಾರೋಗ್ಯದ ಕುರಿತು ವಿಚಾರಿಸಿಕೊಂಡು ಹೋದವು. ಆದರೆ ಆ ಕಾಡಿನಲ್ಲಿದ್ದ ಸೋಮು ನರಿ ಮಾತ್ರ ಬರಲಿಲ್ಲ. ಅದು ಸುಮ್ಮನೆ ಕಾಡಿನಲ್ಲಿ ನಡೆಯುತ್ತಿರುವ ಘಟನೆಗಳನ್ನು ಅಡಗಿ ಕುಳಿತು ನೋಡುತ್ತಿತ್ತು. ಆ ಕಾಡಿನಲ್ಲಿ ಸೀನು ತೋಳವೂ ವಾಸವಾಗಿತ್ತು. ಅದಕ್ಕೆ ಸೋಮುವನ್ನು ಕಂಡರೆ ಆಗುತ್ತಿರಲಿಲ್ಲ. ಹೇಗಾದರೂ ಮಾಡಿ ಸೋಮುವನ್ನು ತೊಂದರೆಗೆ ಸಿಲುಕಿಸಬೇಕೆಂದು






ಯೋಚಿಸುತ್ತಿತ್ತು. ಸೋಮು ನರಿ ಶೇರುವಿನ ಆರೋಗ್ಯ ವಿಚಾರಿಸಲು ಬರಲಿಲ್ಲವೆಂದು ಸೀನುವಿಗೆ ಗೊತ್ತಾಯಿತು. ಅದು ಶೇರುಸಿಂಹದ ಗುಹೆಗೆ ಬಂದಿತು. "ಪ್ರಭೂ, ನಿಮಗೆ ಅನಾರೋಗ್ಯ ಉಂಟಾಗಿರುವುದನ್ನು ಕಂಡು ನನಗೆ ತುಂಬಾ ದುಃಖವಾಗಿದೆ. ಕಾಡಿನಲ್ಲಿರುವ ಎಲ್ಲಾ ಪ್ರಾಣಿಗಳೂ ನಿಮ್ಮನ್ನು ವಿಚಾರಿಸಲು ಬಂದಿದ್ದಾರೆ. ಆದರೆ ಸೋಮು ನರಿ ಮಾತ್ರ ಬಂದಿಲ್ಲ. ಅದು ಏನೋ ಕುತಂತ್ರ ಮಾಡುತ್ತಿದೆ ಎಂದು ನನಗೆ ಅನಿಸುತ್ತದೆ" ಎಂದು ಹೇಳಿತು. ಸೀನುವಿನ ಮಾತುಗಳನ್ನು ಕೇಳಿ ಶೇರುವಿಗೆ ಕೋಪ ಬಂತು. ಅದು ಕೂಡಲೇ ಸೀನುವನ್ನು ಕಳುಹಿಸಿ ಸೋಮು ನರಿಯನ್ನು ಕರೆಸಿಕೊಳ್ಳಲು ಯೋಚಿಸಿತು. ಸೀನು ಮತ್ತು ಶೇರು ಮಾತನಾಡುವುದನ್ನು ಸೋಮು ನರಿ ಗುಟ್ಟಾಗಿ ಕೇಳಿಸಿಕೊಂಡಿತು. ಇದು ಸೀನು ತೋಳಕ್ಕೆ ಗೊತ್ತಿರಲಿಲ್ಲ. ಸೀನು ತೋಳವು ಸೋಮುನರಿಯನ್ನು ಕರೆದುಕೊಂಡು ಬರಲು ಹೊರಟಿತು.

"ಸೋಮೂ, ನಿನ್ನನ್ನು ಕಾಡಿನ ರಾಜ ಕರೆದುಕೊಂಡು ಬರಲು ತಿಳಿಸಿದೆ. ನೀನು ಕೂಡಲೇ ಹೊರಟು ಬಾ" ಸೀನು ತೋಳ ಹೇಳಿತು. ಸೋಮು ಹೆದರಿದಂತೆ ನಟಿಸಿತು. "ಸೀನೂ, ರಾಜನು ಬರಹೇಳಿದುದು ಯಾಕೆ?" ಸೋಮು ಕೇಳಿತು. "ಸೋಮೂ, ನೀನು ರಾಜನ ಆರೋಗ್ಯ ವಿಚಾರಿಸಲು ಹೋಗಲಿಲ್ಲ. ಇದರಿಂದ ರಾಜನಿಗೆ ಬಹಳ ಕೋಪ ಬಂದಿದೆ." ಸೀನು ಹೇಳಿತು. ಸೋಮು ಮೌನವಾಗಿ ತಲೆತಗ್ಗಿಸಿ ಸೀನುವಿನ ಜೊತೆ ಹೊರಟಿತು.

ಗುಹೆಯಲ್ಲಿ ಶೇರು ಮಲಗಿತ್ತು. ತೋಳವು ನರಿಯನ್ನು ಕರೆದುಕೊಂಡು ಬಂದುದನ್ನು ಕಂಡು "ಸೀನೂ, ಶಹಬಾಸ್! ನಾನು ಹೇಳಿದ ಕೆಲಸವನ್ನು ನೀನು ಸರಿಯಾಗಿ ಮಾಡಿದೆ" ಎಂದು ಮೆಚ್ಚುಗೆ ಸೂಚಿಸಿತು. ಸಿಂಹವು

ನರಿಯ ಕಡೆಗೆ ತಿರುಗಿ ಕೋಪದಿಂದ "ಸೋಮೂ, ನನಗೆ ಅನಾರೋಗ್ಯ ಎಂದು ತಿಳಿದೂ ನನ್ನನ್ನು ನೋಡಲು ಯಾಕೆ ಬರಲಿಲ್ಲ?" ಎಂದು ವಿಚಾರಿಸಿತು. ನರಿಯು ಬಹಳ ಬೇಸರದಿಂದ "ಮಹಾರಾಜರೇ, ನಿಮಗೆ ಅನಾರೋಗ್ಯ ಎಂಬ ಸಂಗತಿ ತಿಳಿದು ನನಗೆ ತುಂಬಾ ದುಃಖವಾಯಿತು. ನಾನು ನಿಮ್ಮ ಕಾಯಿಲೆಯನ್ನು ವಾಸಿ ಮಾಡಲು ವೈದ್ಯರ ಸಲಹೆ ಪಡೆಯಲು ಹೋಗಿದ್ದೆ" ಎಂದು ಹೇಳಿತು.

ನರಿಯ ಮಾತುಗಳನ್ನು ಕೇಳಿ ಸಿಂಹಕ್ಕೆ ಸಂತೋಷವಾಯಿತು. "ಹೌದೇ ಸೋಮು. ವೈದ್ಯರು ಎಲ್ಲಿದ್ದಾರೆ? ಬೇಗ ಕರೆದುಕೊಂಡು ಬಾ" ಸಿಂಹ ಹೇಳಿತು. ಸೋಮು ನರಿಯು ಚೀಕು ಕರಡಿ ವೈದ್ಯನನ್ನು ಕರೆದುಕೊಂಡು ಬಂತು. ಚೀಕು ವೈದ್ಯ ಶೇರುವನ್ನು ಪರೀಕ್ಷಿಸಿತು. ಶೇರುವಿನ ಬಾಯಿಯೊಳಗೆ ಒಂದು ಎಲುಬಿನ ತುಂಡು ಸಿಲುಕಿಕೊಂಡಿತ್ತು. ಆ ಜಾಗದಲ್ಲಿ ಹುಣ್ಣಾಗಿತ್ತು. ಚೀಕು ಮೆಲ್ಲನೆ ಆ ಎಲುಬಿನ ತುಂಡನ್ನು ಹೊರಕ್ಕೆ ತೆಗೆಯಿತು. ಗಾಯಕ್ಕೆ ಔಷಧಿ ಹಚ್ಚಿತು. ಕೆಲವು ದಿನಗಳಲ್ಲಿ ಶೇರುವಿನ ಕಾಯಿಲೆ ವಾಸಿಯಾಯಿತು.



# ಕಲಿಕಾ ಸಾಧನೆಗಳು

## ಕನ್ನಡ

1. ಸಹಜ ಸಂದರ್ಭಗಳಲ್ಲಿ ಆಶಯವನ್ನು ಮುಂದುವರಿಸಿಕೊಂಡು ಸಂಭಾಷಣೆ ನಡೆಸುವುದು ಮತ್ತು ತಪ್ಪಿಲ್ಲದೆ ಬರೆಯುವುದು.
2. ಹಾಡುಗಳನ್ನು ವೈಯಕ್ತಿಕವಾಗಿ ಮತ್ತು ಗುಂಪಾಗಿ ರಾಗ, ತಾಳ, ಲಯಬದ್ಧವಾಗಿ ಹಾಡುವುದು.
3. ವಾಚನಸಾಮಗ್ರಿಗಳ ಆಶಯವನ್ನು ಅರ್ಥೈಸಿಕೊಂಡು ಓದಿ ಕಂಡುಕೊಂಡ ವಿಚಾರಗಳನ್ನು ಇತರರೊಂದಿಗೆ ವಿನಿಮಯ ಮಾಡುವುದು.
4. ಸರಳವಾದ ಒಗಟುಗಳ ಉತ್ತರವನ್ನು ಕಂಡುಹಿಡಿದು ಹೊಸ ಒಗಟುಗಳನ್ನು ರಚಿಸುವುದು.
5. ಘೋಷಣವಾಕ್ಯಗಳನ್ನು ಓದಿ ಆಶಯವನ್ನು ಅರ್ಥೈಸುವುದು ಮತ್ತು ಸೂಕ್ತವಾದ ಘೋಷಣವಾಕ್ಯವನ್ನು ತಯಾರು ಮಾಡುವುದು.
6. ಚಿತ್ರಕಥೆಗಳನ್ನು ನಿರೀಕ್ಷಣೆ ಮಾಡಿ ಆಶಯಗಳನ್ನು ಕ್ರಮೀಕರಿಸಿ ಕಥೆ ಹೇಳುವುದು ಮತ್ತು ಬರೆಯುವುದು.

## ಪರಿಸರ

1. ವಿವಿಧ ರೋಗಗಳನ್ನು ಪಟ್ಟಿ ಮಾಡುವುದು.
2. ಹರಡುವ ಮತ್ತು ಹರಡದ ರೋಗಗಳನ್ನು ವರ್ಗೀಕರಿಸುವುದು.
3. ವ್ಯಕ್ತಿ ಶುಚಿತ್ವ ಮತ್ತು ಪರಿಸರ ಶುಚಿತ್ವದಿಂದ ಹಲವು ರೋಗಗಳನ್ನು ತಡೆಗಟ್ಟಬಹುದೆಂದು ತಿಳಿಯುವುದು.
4. ಆರೋಗ್ಯ ಸಂರಕ್ಷಣೆಗೆ ಶರೀರದ ಅವಯವಗಳನ್ನು ಸಂರಕ್ಷಿಸಬೇಕಾದುದು ಅಗತ್ಯವೆಂದು ತಿಳಿಯುವುದು.
5. ಶುಚಿತ್ವಕ್ಕೆ ಬಳಸುವ ಉಪಕರಣಗಳನ್ನು ಗುರುತಿಸುವುದು.
6. ವ್ಯಾಯಾಮ ಮತ್ತು ವಿಶ್ರಾಂತಿಯಿಂದ ಆರೋಗ್ಯ ಚೆನ್ನಾಗಿರುವುದೆಂದು ತಿಳಿಯುವುದು.
7. ಉತ್ತಮ ಆರೋಗ್ಯ ಅಭ್ಯಾಸಗಳನ್ನು ತಿಳಿಯುವುದು.

## ಪಾಠ - 4



# ಹಸಿರಿನ ಸಿರಿ

ಮಂದಾಕಿನಿ ಹೊಳೆಯ ದಡದಲ್ಲಿ ಒಂದು ದೊಡ್ಡ ಮಾವಿನ ಮರ. ಆ ಮರದ ಪೊಟರೆಯಲ್ಲಿ ಮಿನ್ನು ಗಿಳಿ ತನ್ನ ಮರಿಗಳೊಂದಿಗೆ ವಾಸಮಾಡುತ್ತಿತ್ತು. ನಿತ್ಯವೂ ಮರಿಗಳಿಗೆ ಹಣ್ಣು ತಂದು ಕೊಡುತ್ತಿತ್ತು. ಒಂದು ದಿನ ಹಣ್ಣು ತರಲು ಹಾರಿ ಹೋಯಿತು. ತುಂಬಾ ದೂರ ಹೋದರೂ ಮಿನ್ನುವಿಗೆ ಹಣ್ಣು ಸಿಗಲೇ ಇಲ್ಲ. ಬೇಸರಗೊಂಡ ಮಿನ್ನು ಒಂದು ಮರದ ಕೊಂಬೆಯಲ್ಲಿ ಕುಳಿತುಕೊಂಡಿತು.




# ಮಿನ್ನುವಿನ ತೋಟ

ಆಗ ಮಿನ್ನುವಿಗೆ ಆ ಮರದ ಕೆಳಗೆ ಒಂದು ಹಣ್ಣು ಬಿದ್ದಿರುವುದು ಕಂಡಿತು. ಸಂತೋಷದಿಂದ ಅದನ್ನು ಕಚ್ಚಿಕೊಂಡು ಹಾರಿತು. ಹಾರುವಾಗ ಹಣ್ಣು ಅದರ ಕೊಕ್ಕಿನಿಂದ ಕೆಳಗೆ ಬಿತ್ತು.



ಮಿನ್ನು ತಕ್ಷಣ ಹಣ್ಣಿಗಾಗಿ ಕೆಳಗೆ ಹಾರಿತು. ಆಗ ತಾನೇ ಮಳೆ ಬಿದ್ದಿದ್ದರಿಂದ ಭೂಮಿ ಚೆನ್ನಾಗಿ ಒದ್ದೆಯಾಗಿತ್ತು. ಹಣ್ಣು ಮಣ್ಣಿನಲ್ಲಿ ಹೂತುಹೋಗಿತ್ತು. ಮಿನ್ನುವಿಗೆ ಹಣ್ಣು ಕಾಣಲೇ ಇಲ್ಲ.





ಮಿನ್ನು ಬೇಸರದಿಂದ ಗೂಡಿಗೆ ಹಿಂತಿರುಗಿತು.



ಆದರೆ ನಿತ್ಯವೂ ಮಿನ್ನುವಿಗೆ ಆ ಹಣ್ಣಿನ ನೆನಪು ಆಗುತ್ತಿತ್ತು. ಅದು ದಿನವೂ ಆ ಜಾಗಕ್ಕೆ ಬಂದು ನೋಡುತ್ತಿತ್ತು. ಒಂದು ದಿನ ಮಿನ್ನುವಿಗೆ ಹಣ್ಣು ಬಿದ್ದ ಜಾಗದಲ್ಲಿ ಒಂದು ಗಿಡ ಕಂಡಿತು. ಮಿನ್ನು ದಿನವೂ ಅದನ್ನು ನೋಡಲು ಬರತೊಡಗಿತು.






ಒಂದು ದಿನ ಮೊಲವೊಂದು ಆ ಗಿಡದ ಎಲೆಗಳನ್ನು ತಿನ್ನಲು ತೊಡಗಿತು. ಅಷ್ಟರಲ್ಲಿ ಅಲ್ಲಿಗೆ ಮಿನ್ನು ಬಂದಿತು. ಅದು ಮೊಲವನ್ನು ಹೆದರಿಸಿ ಓಡಿಸಿತು. ಗಿಡದ ಎಲೆಗಳನ್ನು ಇತರ ಪ್ರಾಣಿಗಳು ತಿಂದರೆ ಆ ಗಿಡ ಬೆಳೆಯದು, ಆ ಗಿಡವನ್ನು ಕಾಪಾಡಬೇಕು ಎಂದು ಯೋಚಿಸಿತು.





ಮಿನ್ನು ತನ್ನ ಗೆಳೆಯರನ್ನೆಲ್ಲಾ ಕರೆಯಿತು. ಗಿಡದ ಬಗ್ಗೆ ಹೇಳಿತು. ಎಲ್ಲರೂ ಸೇರಿ ಆ ಗಿಡವನ್ನು ಕಾಪಾಡಲು ತೀರ್ಮಾನಿಸಿದವು. ಪುಟ್ಟ ಪುಟ್ಟ ಕೊಂಬೆಗಳನ್ನು ಮತ್ತು ಮುಳ್ಳು ಗಿಡಗಳನ್ನು ಆರಿಸಿ ತಂದವು. ಅವುಗಳಿಂದ ಗಿಡದ ಸುತ್ತಲೂ ಬೇಲಿ ಕಟ್ಟಿದವು. ಮಿನ್ನು ಮತ್ತು ಗೆಳೆಯರು ಆ ಗಿಡಕ್ಕೆ ದಿನವೂ ನೀರು ಹಾಕುತ್ತಿದ್ದವು. ಕೆಲವು ದಿವಸಗಳಿಗೊಮ್ಮೆ ಗೊಬ್ಬರ ಹಾಕಿದವು. ಗಿಡದ ಬೇರುಗಳು ಭೂಮಿಯಲ್ಲಿ ಆಳವಾಗಿ ಇಳಿದು ಬಲವಾದುವು. ಗೆಲ್ಲುಗಳು ಗಟ್ಟಿಯಾಗಿ ಬೆಳೆದುವು. ಗಿಡ ದೊಡ್ಡದಾಗಿ ಬೆಳೆದು ನಿಂತಿತು. ದಿನಗಳು ಕಳೆದುವು.




ಮರದಲ್ಲಿ ಹೂಗಳು ಅರಳಿದುವು. ದುಂಬಿಗಳು ಮರದ ಹೂಗಳಿಂದ ಜೇನನ್ನು ಹೀರಿದವು. ಕೆಲವು ದಿನಗಳ ಅನಂತರ ಆ ಹೂಗಳು ಉದುರಿದವು. ಆ ಜಾಗದಲ್ಲಿ ಮಿಡಿಗಳು ಕಾಣಿಸಿದುವು. ಆ ಮಿಡಿಗಳು ಬಲಿತು ಹಣ್ಣುಗಳು ಆದುವು. ಮಿನ್ನು ಮತ್ತು ಗೆಳೆಯರು ಬೇಕಾದಷ್ಟು ಹಣ್ಣುಗಳನ್ನು ತಿಂದು ತೇಗಿದುವು. ಎಲ್ಲಾ ಗೆಳೆಯರು ಆ ಮರವನ್ನೇ ತಮ್ಮ ಮನೆಯನ್ನಾಗಿ ಮಾಡಿಕೊಂಡವು. ಸೂರ್ಯನ ಉರಿಬಿಸಿಲಿನಿಂದ ಹಾಗೂ ಬಿರುಸಾದ ಮಳೆಯಿಂದ ಮರವು ಹಕ್ಕಿಗಳಿಗೆ ನೆರಳು ಹಾಗೂ ಆಶ್ರಯ ಕೊಡುತ್ತಿತ್ತು. ಮಿನ್ನು ಮತ್ತು ಗೆಳೆಯರು ಸೇರಿ ಆ ಮರದ ಹಣ್ಣಿನ ಬೀಜಗಳನ್ನು ಹಾಕಿ ಒಂದು ಹಣ್ಣಿನ ತೋಟವನ್ನೇ ಮಾಡಿದವು.

## ಉತ್ತರಿಸಿರಿ

- ಭೂಮಿಗೆ ಬಿದ್ದ ಹಣ್ಣು ಏನಾಯಿತು?
- ಮಿನ್ನು ಮೊಲವನ್ನು ಯಾಕೆ ಓಡಿಸಿತು?
- ಮಿನ್ನು ಗಿಡವನ್ನು ಕಾಪಾಡಲು ಏನೇನು ಮಾಡಿತು?
- ಮಿನ್ನು ಮತ್ತು ಗೆಳೆಯರು ಹಣ್ಣಿನ ತೋಟವನ್ನು ಮಾಡಿದ್ದು ಹೇಗೆ?

## ಬರೆಯಿರಿ

- ಗಿಡದ ವಿವಿಧ ಭಾಗಗಳನ್ನು ಗುರುತಿಸಿ ಅವುಗಳ ಹೆಸರನ್ನು ಬರೆಯಿರಿ.





## ಓದಿರಿ



ಬಳ್ಳಿಗಳ ಕಾಂಡಗಳು
ಉದ್ದವಾಗಿದ್ದು
ಮೃದುವಾಗಿರುತ್ತವೆ.



ಪೊದರುಗಳ ಕಾಂಡಗಳು
ಸ್ವಲ್ಪ ಗಟ್ಟಿಯಾಗಿರುತ್ತವೆ.
ಕೊಂಬೆಗಳು ಸಸ್ಯದ
ಬುಡದಿಂದಲೇ ಹುಟ್ಟಿ
ಹರಡಿಕೊಂಡಿರುತ್ತವೆ.



ಮರಗಳು ಎತ್ತರವಾಗಿ
ಬೆಳೆಯುತ್ತವೆ. ಅವುಗಳು
ದೀರ್ಘವಾಗಿ ಬಾಳುತ್ತವೆ. ಮರಗಳ
ಕಾಂಡಗಳು ಗಟ್ಟಿಯಾಗಿರುತ್ತವೆ.

## ಪಟ್ಟಿಮಾಡಿರಿ

ನೀವು ನೋಡಿರುವ ಬೇರೆ ಬೇರೆ ಸಸ್ಯಗಳನ್ನು ಪೊದರುಗಳು, ಬಳ್ಳಿಗಳು ಹಾಗೂ ಮರಗಳು ಎಂಬುದಾಗಿ ಗುರುತಿಸಿ ಆಯಾ ಪಟ್ಟಿಯಲ್ಲಿ ಬರೆಯಿರಿ.

| ಬಳ್ಳಿ | ಪೊದರು | ಮರ |
|---|---|---|
| | | |

## ಬರೆಯಿರಿ

ನಿಮಗೆ ತಿಳಿದಿರುವ ಸಸ್ಯಗಳನ್ನು ಪಟ್ಟಿ ಮಾಡಿರಿ. ಅವುಗಳನ್ನು ಬೀಜದಿಂದ, ಕಾಂಡದಿಂದ, ಬೇರಿನಿಂದ ಗಿಡಗಳಾಗುವವು ಎಂದು ವಿಂಗಡಿಸಿ ಕೋಣೆಗಳಲ್ಲಿ ಬರೆಯಿರಿ.

| ಸಸ್ಯದ ಹೆಸರು | ಬೀಜ | ಕಾಂಡ | ಬೇರು |
|---|---|---|---|
| | | | |

**ಓದಿರಿ**

# ಯಾರು ಶ್ರೇಷ್ಠ



ಒಮ್ಮೆ ಮಾವಿನ ಮರದ ಎಲೆಗೂ ಬೇರಿಗೂ ಜಗಳವಾಯಿತು. ಮಾವಿನ ಮರದ ಎಲೆ ಜಂಭದಿಂದ ಹೇಳಿತು “ನಾನು ತುಂಬಾ ಎತ್ತರದಲ್ಲಿದ್ದೇನೆ. ನನಗೆ ಸುತ್ತಲೂ ನೋಡಲು ಸಾಧ್ಯವಿದೆ. ಗಾಳಿಯಲ್ಲಿ ಅತ್ತಿತ್ತ ಹಾರಾಡಲು ಸಾಧ್ಯ. ನನ್ನ ಎಲೆಗಳನ್ನು ತೋರಣ ಕಟ್ಟಲು, ಹಲ್ಲು ಉಜ್ಜಲು ಮತ್ತು ಔಷಧಿಗೆ ಉಪಯೋಗಿಸುತ್ತಾರೆ. ನೀನು ಏನೂ ಅಲ್ಲ. ಯಾವಾಗಲೂ ಮಣ್ಣಿನ ಅಡಿಯಲ್ಲೇ ಇರುವುದು. ಅಲ್ಲಿ ಯಾವಾಗಲೂ ಕತ್ತಲೆಯೇ. ಏನನ್ನೂ ನೋಡಲು ಸಾಧ್ಯವಿಲ್ಲ.” ಅದನ್ನು ಕೇಳಿ ಬೇರಿಗೆ ಬೇಸರವಾಯಿತು. ಅದು ಅಳತೊಡಗಿತು. ಅದರ ಕೂಗು ಕಾಂಡಕ್ಕೆ ಕೇಳಿಸಿತು. “ಯಾಕೆ ಅಳುತ್ತೀಯಾ?” ಕಾಂಡ ಕೇಳಿತು. ಬೇರು ತನ್ನ ಸಂಕಟವನ್ನು ಹೇಳಿಕೊಂಡಿತು. ಕಾಂಡ ಒಂದು ಉಪಾಯ ಹೇಳಿಕೊಟ್ಟಿತು. ಬೇರು ಅದರಂತೆಯೇ ಮಾಡಿತು. ದಿನಗಳು ಕಳೆದವು. ಎಲೆಗಳು ತಮ್ಮ ಹಸಿರು ಬಣ್ಣವನ್ನು ಕಳೆದುಕೊಂಡವು. ಎಲೆಗಳು ಒಣಗಲು ತೊಡಗಿದವು. ಕೆಲವು ಎಲೆಗಳು ಉದುರಿಹೋದವು. ಆಗ ಎಲೆಗಳಿಗೆ ತಮ್ಮ ತಪ್ಪಿನ ಅರಿವಾಯಿತು. ಎಲ್ಲಾ ಎಲೆಗಳು ಬೇರಿನಲ್ಲಿ ಕ್ಷಮೆಯಾಚಿಸಿದವು. ಬೇರುಗಳು ಮತ್ತೆ ತಮ್ಮ ಕೆಲಸ ಶುರುಮಾಡಿದವು. ಎಲೆಗಳು ಮತ್ತೆ ಹಸಿರಾದವು. ಅನಂತರ ಅವರು ಪರಸ್ಪರ ಜಗಳ ಮಾಡಲೇ ಇಲ್ಲ.



## ಉತ್ತರಿಸಿರಿ

- ಸಸ್ಯಗಳ ಬೇರುಗಳು ಎಲ್ಲಿ ಬೆಳೆಯುತ್ತವೆ?
- ಸಸ್ಯಗಳ ಎಲೆಗಳು ಎಲ್ಲಿ ಬೆಳೆಯುತ್ತವೆ?
- ಮಾವಿನ ಎಲೆಗಳು ತಾನೇ ಶ್ರೇಷ್ಠ ಎನ್ನಲು ಕಾರಣವೇನು?
- ಸಸ್ಯಗಳ ಬೇರುಗಳ ಕೆಲಸವೇನು?

## ಬರೆಯಿರಿ

- ಮಾವಿನ ಎಲೆ ಮತ್ತು ಬೇರುಗಳೊಳಗೆ ನಡೆದ ಮಾತುಕತೆಯನ್ನು ಸಂಭಾಷಣಾ ರೂಪದಲ್ಲಿ ಬರೆಯಿರಿ.


## ಬರೆಯಿರಿ

ಚಿತ್ರದಲ್ಲಿರುವ ಎಲೆಗಳು ಯಾವ ಮರದ ಎಲೆಗಳು ಎಂದು ಬರೆಯಿರಿ









ಪೂರ್ತಿಗೊಳಿಸಿರಿ.

| ಎಲೆಗಳು | ಪರಿಮಳ | ಬಣ್ಣ | ದೊಡ್ಡದು/ಸಣ್ಣದು |
|---|---|---|---|
| ಬಾಳೆ | ಇಲ್ಲ | ಹಸಿರು | ದೊಡ್ಡದು |
| ತುಳಸಿ | ಇದೆ | ಹಸಿರು | ಸಣ್ಣದು |
| | | | |
| | | | |




ಕೆಳಗೆ ಕೊಟ್ಟಿರುವ ಸಸ್ಯಗಳ ಎಲೆಗಳ ಉಪಯೋಗವನ್ನು ಬರೆಯಿರಿ.

| ಎಲೆ | ಉಪಯೋಗ |
|---|---|
| ಬಾಳೆ | |
| ತುಳಸಿ | |
| ಕೆಸುವು | |
| ಅಡಿಕೆ ಮರ | |

## ಆಲ್ಬಂ ತಯಾರಿಸಿರಿ

ವಿವಿಧ ಸಸ್ಯಗಳ ಎಲೆಗಳನ್ನು ಸಂಗ್ರಹಿಸಿರಿ ಒಂದು ಆಲ್ಬಂ ತಯಾರಿಸಿರಿ. ಆ ಎಲೆಗಳ ಉಪಯೋಗಗಳನ್ನು ಬರೆಯಿರಿ.

## ಬರೆಯಿರಿ

**ವಿವರಣೆಯನ್ನು ಓದಿ ಇದು ಯಾವ ಮರ ಎಂದು ಬರೆಯಿರಿ.**



ನಾನು ಉದ್ದವಾದ ಮರ ನನಗೆ ಕೊಂಬೆಗಳಿಲ್ಲ. ನನ್ನ ಕಾಂಡದ ತುದಿಯಲ್ಲಿ ದೊಡ್ಡದಾದ ಎಲೆಗಳಿವೆ. ಅದರಿಂದ ಪೊರಕೆ ಮಾಡುತ್ತಾರೆ. ಎಲೆಗಳ ಬುಡದಲ್ಲಿ ಗೊನೆಗಳು ಇರುತ್ತವೆ. ಗೊನೆಯಲ್ಲಿ ಕಾಯಿಗಳು ಇರುತ್ತವೆ. ನನ್ನ ಎಳೆಯ ಕಾಯಿಯ ನೀರು ತುಂಬಾ ಸಿಹಿ. ಇದು ರೋಗಿಗಳಿಗೆ ಉತ್ತಮ ಆಹಾರ. ಬಲಿತ ಕಾಯಿಯ ತಿರುಳಿನಿಂದ ಪದಾರ್ಥಗಳನ್ನು ತಯಾರಿಸುತ್ತಾರೆ. ಒಣಗಿದ ತಿರುಳನ್ನು ಕೊಬ್ಬರಿ ಎನ್ನುತ್ತಾರೆ. ಕೊಬ್ಬರಿಯಿಂದ ಎಣ್ಣೆ ತೆಗೆಯುತ್ತಾರೆ. ನನ್ನ ಪ್ರತಿಯೊಂದು ಭಾಗವೂ ತುಂಬಾ ಉಪಯೋಗಕ್ಕೆ ಬರುತ್ತದೆ.

## ಬರೆಯಿರಿ

**ನಿಮಗೆ ಇಷ್ಟವಾದ ಒಂದು ಮರದ ಕುರಿತು ಬರೆಯಿರಿ.**

# ಕಡಿಯ ಬೇಡವೋ ಮರವ



ಕಡಿಯ ಬೇಡವೋ ಮರವ
ಕಡಿಯಬೇಡವೋ
ಗಿಡವು ಮರವು ಇರುವ ಕಾಡ
ಕಡಿದು ನಾಶಮಾಡಬೇಡ

ಕಾಡು ನಾಶವಾಗುವಂದು
ನೋಡು ಶಾಖ ಏರಿನಿಂದು
ನಾಡ ನೆಲದ ಜೀವ ಕೋಟಿ
ಪಡುವ ಪಾಡಿಗಿಲ್ಲ ಸಾಟಿ

ಪರಿಸರದಲಿ ಏರುಪೇರು
ಬರಲು ಬದುಕು ನುಚ್ಚುನೂರು
ಇರುವ ಗಿಡವ ಮರವನುಳಿಸು
ಹುರುಪಿನಿಂದ ಹೊಸತು ಬೆಳೆಸು

ಶುದ್ಧಗಾಳಿ, ಹಣ್ಣು, ಹೂವು
ಮದ್ದು, ಸೌದೆ, ಮೋಪು, ಮೇವು
ಇದ್ದಲು ಅಂಟು, ರಾಳ, ಗಂಧ
ವೃದ್ಧಿ ಮಳೆಯು ಕಾಡಿನಿಂದ

– ಪಳಕಳ ಸೀತಾರಾಮ ಭಟ್ಟ




## ಹಾಡಿರಿ

ಪದ್ಯವನ್ನು ರಾಗವಾಗಿ ಹಾಡಿರಿ

## ಉತ್ತರಿಸಿರಿ

- ಕಾಡು ನಾಶವಾದರೆ ಏನಾಗಬಹುದು?
- ಸಸ್ಯಗಳನ್ನು ನೆಟ್ಟು ಬೆಳೆಸಿ ಸಂರಕ್ಷಿಸಬೇಕು ಯಾಕೆ?
- ಸಸ್ಯಗಳಿಂದ ನಮಗೆ ಏನೇನು ಪ್ರಯೋಜನಗಳಿವೆ?

### ಸರಳ ಪ್ರಯೋಗ



ಎರಡು ಆರೋಗ್ಯವಂತ ಚಿಕ್ಕ ಗಿಡಗಳನ್ನು ಬೇರು ಸಮೇತ ಕಿತ್ತು ತೆಗೆಯಿರಿ. ಅವುಗಳನ್ನು ಎರಡು ಪ್ರತ್ಯೇಕ ಹೂಕುಂಡಗಳಲ್ಲಿ ನೆಡಿರಿ. ಒಂದು ಹೂಕುಂಡಕ್ಕೆ ನೀರು ಮತ್ತು ಗೊಬ್ಬರ ಹಾಕಿರಿ. ಇನ್ನೊಂದಕ್ಕೆ ಏನೂ ಹಾಕದೆ ಹಾಗೆ ಬಿಟ್ಟುಬಿಡಿ. ಕೆಲವು ದಿನಗಳ ಅನಂತರ ಏನು ಕಾಣುವಿರಿ? ಯಾಕೆ ಎಂದು ಪರಿಸರ ಪುಸ್ತಕದಲ್ಲಿ ಬರೆಯಿರಿ.




ಈ ಪದ್ಯದ ಸಾಲುಗಳನ್ನು ಮುಂದುವರಿಸಿರಿ ಬರೆಯಿರಿ.

## ಬಗೆಬಗೆಯ ಮರಗಳು

ಮಾವಿನ ಮರಗಳು, ತೆಂಗಿನ ಮರಗಳು
ಅಪ್ಪನ ತೋಟದಲಿ
ಪೇರಳೆ ಗಿಡಗಳು, ಪಪ್ಪಾಯಿ ಗಿಡಗಳು
ಅಮ್ಮನ ತೋಟದಲಿ
...........................................
...........................................
...........................................
...........................................




ನಿಮ್ಮ ಶಾಲೆಯ ಸಮೀಪದ ಯಾವುದಾದರೊಂದು ತೋಟಕ್ಕೆ ಭೇಟಿಕೊಟ್ಟು ಅಲ್ಲಿಯ ಕೃಷಿಯ ವಿಧಾನವನ್ನು ತಿಳಿಯಿರಿ.




ನಿಮಗೆ ತಿಳಿದಿರುವ ಯಾವುದಾದರೊಂದು ತರಕಾರಿ ಕೃಷಿಯ ಬಗ್ಗೆ ಬರೆಯಿರಿ.

## ಬಣ್ಣ ಹಚ್ಚಿರಿ

ಕೆಳಗಿನ ಚಿತ್ರಕ್ಕೆ ಬಣ್ಣ ಹಚ್ಚಿರಿ.



## ಬರೆಯಿರಿ

ನೀರಿನಲ್ಲಿರುವ ಸಸ್ಯಗಳನ್ನು ನೀವು ಗಮನಿಸಿರಬಹುದು. ಅವುಗಳು ಯಾವುವೆಂದು ಪಟ್ಟಿ ಮಾಡಿರಿ.

## ಓದಿರಿ


# ಕಾಡೇ ನಾಡಿನ ಸಂಪತ್ತು

ಕಾಡಿನಲ್ಲಿ ಅನೇಕ ಜಾತಿಯ ಮರಗಳು ಬೆಳೆಯುತ್ತವೆ. ಪ್ರಾಣಿಗಳಿಗೆ ಮತ್ತು ನಮಗೆ ಕಾಡಿನಿಂದ ಅನೇಕ ಪ್ರಯೋಜನಗಳು ಇವೆ. ಮರಗಳು ಹಣ್ಣುಗಳನ್ನು ಕೊಡುತ್ತವೆ. ಮರಗಳಿಂದ ನಮಗೆ ಸೊಪ್ಪು, ಕಟ್ಟಿಗೆ ಮುಂತಾದವು ಸಿಗುತ್ತವೆ. ಹಲವು ಔಷಧಿಗಳಿಗೆ ಬೇಕಾದ ಬೇರು, ಎಲೆ, ಬಳ್ಳಿ ಹಾಗೂ ಕಾಯಿಗಳು ಕಾಡಿನಿಂದಲೇ ಸಿಗುತ್ತವೆ. ಕಾಡುಗಳು ಇರುವಲ್ಲಿ ಹೆಚ್ಚು ಮಳೆ ಸುರಿಯುತ್ತದೆ. ನಮಗೆ ಉಸಿರಾಡಲು ಶುದ್ಧ ಗಾಳಿಯೂ ಸಿಗುತ್ತದೆ. ವಾಯು ಮಾಲಿನ್ಯವನ್ನು ತಡೆಯುವಲ್ಲಿ ಮರಗಳ ಕೊಡುಗೆ ಅಪಾರ. ಪ್ರತಿಯೊಬ್ಬರೂ ಒಂದೊಂದು ಗಿಡ ನೆಟ್ಟು ಬೆಳೆಸುವುದು ಪರಿಸರ ಸಂರಕ್ಷಣೆಗೆ ಸಹಾಯಕ. ಮನೆಗೆ ಒಂದು ಮರ ಊರಿಗೊಂದು ವರ.




## ಬರೆಯಿರಿ

ನಿಮ್ಮ ಶಾಲೆಯ ತೋಟದಲ್ಲಿ ಪ್ರದರ್ಶಿಸಲು ಸೂಚನಾ ಫಲಕಗಳನ್ನು ತಯಾರಿಸಿರಿ.








# ಪದಬಂಧ








|  |  |  |  |  |  |  |
|---|---|---|---|---|---|---|
|  | 1 ಹಾ |  |  | 2 |  | ನೆ |
|  |  |  | 3 ಅ |  |  |  |
| 4 ಹ |  |  |  |  | ಣ್ಣು |  |
|  |  |  |  |  |  | 5 |
|  | 6 ಮೆ |  |  |  |  | ಚೆ |
| 7 |  |  |  |  | 8 ಅ |  |
| ಲ್ಲಿ |  | 9 | ಲ್ಲಂ |  |  |  |
|  |  |  |  |  |  |  |







## ಎಡದಿಂದ ಬಲಕ್ಕೆ

2. ಹುಟ್ಟುವಾಗಲೇ ತಲೆಯಲ್ಲಿ ಟೋಪಿ ಹಾಕಿರುವವ.
4. ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದಾನೆ.
6. ಕೆಂಪು ಕುಪ್ಪಿಯಲ್ಲಿ ಗಿಜಿಗಿಜಿ ಕಾಯಿ.
9. ಹಸಿರು ಕೋಟೆಯೊಳಗೆ ಕೆಂಪು ಅರಮನೆ. ಅದರಲ್ಲಿ ಕಪ್ಪು ಸೈನಿಕರು.

## ಮೇಲಿನಿಂದ ಕೆಳಗೆ

1. ಎಲ್ಲರಿಗೂ ಬೇಕಾಗಿರೋ ಅಜ್ಜಿ, ಅವಳ ಮೈಮೇಲೆಲ್ಲಾ ಕಜ್ಜಿ.
3. ಗಿಡದ ಮೇಲೆ ಹಣ್ಣು. ಹಣ್ಣಿನ ಮೇಲೆ ಗಿಡ.
5. ಮುಳ್ಳಿನ ಗಿಡದಲ್ಲಿ ಚಿನ್ನದ ಮೊಟ್ಟೆ.
7. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ.
8. ಉದ್ದ ಮರದಲ್ಲಿ ಕೆಂಪು ಸನ್ಯಾಸಿ.

# ನನ್ನ ಕೃಷಿ

ಮಳೆಯು ಬರಲು
ನೆಲವ ಅಗೆದು
ಪಾತಿ ಮಾಡಿದೆ
ಬೆಂಡೆ ಸೌತೆ ಬೀಜಗಳನು
ಅಲ್ಲಿ ಹಾಕಿದೆ
ಬೀಜ ಮೊಳಕೆ ಒಡೆಯುವಾಗ
ಸೊಪ್ಪು ಹಾಕಿದೆ
ಗಿಡವು ಮೇಲೆ ಬರಲು ಬುಡಕೆ
ಬೂದಿ ಹಾಕಿದೆ
ಬೆಂಡೆ ಗಿಡವು ನೇರವಾಗಿ
ಮೇಲೆ ಬಂದಿತು
ಸೌತೆ ಬಳ್ಳಿ ನೆಲದ ಮೇಲೆ
ಹಬ್ಬ ತೊಡಗಿತು
ತಿಂಗಳೊಂದು ಕಳೆಯಲಿದೋ
ಹೂವು ಅರಳಿತು
ಮುಂದೆ ಕೆಲವು ದಿನಗಳಲ್ಲೆ
ಕಾಯಿಯಾಯಿತು.
ಬೆಂಡೆಕಾಯಿ ಕೊಯ್ದು ನಾನು
ಸಾರು ಮಾಡಿದೆ
ಸೌತೆಕಾಯಿ ಕೊಯ್ದು ನಾನು
ಪಲ್ಯ ಮಾಡಿದೆ
ನೀವು ಕೂಡ ನನ್ನ ಹಾಗೆ
ಕೃಷಿಯ ಮಾಡಿರಿ
ಬೆಳೆದ ಬೆಳೆಯ ಗೆಳೆಯರೊಡನೆ
ಹಂಚಿ ತಿನ್ನಿರಿ.

– ಪ್ರಸನ್ನ ಎ. ಚೆಕ್ಕೆಮನೆ



# ಕಲಿಕಾ ಸಾಧನೆಗಳು

## ಕನ್ನಡ

1. ಓದುವಸಾಮಗ್ರಿಗಳ ಆಶಯವನ್ನು ಓದಿ ಅರ್ಥೈಸಿಕೊಂಡು ಕಂಡುಕೊಂಡ ವಿಚಾರಗಳನ್ನು ಇತರರೊಂದಿಗೆ ವಿನಿಮಯ ಮಾಡಿಕೊಳ್ಳುವುದು.
2. ಕೊಟ್ಟಿರುವ ಸಾಲುಗಳ ಲಯವನ್ನು ಪರಿಗಣಿಸಿಕೊಂಡು ಸೂಕ್ತವಾದ ಸಾಲುಗಳನ್ನು ಸೇರಿಸಿ ಬರೆಯುವುದು ಮತ್ತು ಹಾಡುವುದು.
3. ವಾಕ್ಯರಚನಾ ಕ್ರಮವನ್ನು ಪಾಲಿಸಿಕೊಂಡು ತನ್ನ ಆಶಯವನ್ನು ಸರಳವಾಕ್ಯಗಳಲ್ಲಿ ಬರೆಯುವುದು.
4. ಘೋಷಣವಾಕ್ಯಗಳನ್ನು ಓದಿ ಆಶಯವನ್ನು ಅರ್ಥೈಸುವುದು ಮತ್ತು ಸೂಕ್ತವಾದ ಘೋಷಣವಾಕ್ಯಗಳನ್ನು ತಯಾರಿಸುವುದು.
5. ಆಲಿಸಿದ/ಓದಿದ ಪದ್ಯಗಳನ್ನು ವೈಯಕ್ತಿಕವಾಗಿಯೂ ಗುಂಪಾಗಿಯೂ ರಾಗ, ತಾಳ, ಲಯಬದ್ಧವಾಗಿ ಹಾಡುವುದು.
6. ಸರಳವಾದ ಒಗಟುಗಳ ಉತ್ತರವನ್ನು ಕಂಡುಹಿಡಿಯುವುದು.
7. ಸಹಜ ಸಂದರ್ಭಗಳಲ್ಲಿ ಆಶಯವನ್ನು ಮುಂದುವರಿಸಿಕೊಂಡು ಸಂಭಾಷಣೆ ಬರೆಯುವುದು.

## ಪರಿಸರ

1. ಸಸ್ಯದ ಮುಖ್ಯ ಭಾಗಗಳನ್ನು ಗುರುತಿಸುವುದು.
2. ಸಸ್ಯಗಳ ಎಲೆಗಳಲ್ಲಿರುವ ವೈವಿಧ್ಯವನ್ನು ತಿಳಿದುಕೊಳ್ಳುವುದು.
3. ದೈನಂದಿನ ಆವಶ್ಯಕತೆಗಳಿಗಾಗಿ ನಾವು ಸಸ್ಯಗಳನ್ನು ಅವಲಂಬಿಸಿರುವುದನ್ನು ಗುರುತಿಸುವುದು.
4. ಗಿಡಗಳನ್ನು ನೆಟ್ಟು ಬೆಳೆಸುವ ಅಗತ್ಯವನ್ನು ಮನಗಾಣುವುದು.
5. ಸಸ್ಯಗಳ ಬೆಳವಣಿಗೆಗೆ ನೀರು ಗೊಬ್ಬರ ಅಗತ್ಯವೆಂದು ತಿಳಿಯುವುದು.
6. ಮರ ಕಡಿಯಬಾರದು. ಇದು ನಮ್ಮದೆಂಬ ಭಾವನೆಯನ್ನು ಬೆಳಿಸಿಕೊಳ್ಳುವುದು.
7. ಸಸ್ಯಗಳಿಂದ ನಮಗೆ ಅನೇಕ ಪ್ರಯೋಜನಗಳಿವೆ ಎಂದು ತಿಳಿದುಕೊಳ್ಳುವುದು.